# ತಿರುಮಲೈ ತಿರುಪತಿ ದೇವಸ್ಥಾನದಲ್ಲಿನ ಶಾಸನಗಳು

**ಸಂಪುಟ : I - II - III**

# ಕನ್ನಡ ಭಾಷೆ


**ಸೀತಾರಾಮ ಜಾಗೀರ್‌ದಾರ್**

**'ಕಲ್ಪ' 406/B, 1,**
**ಮೇನ್ - 3, ಕ್ರಾಸ್ - 7,**
**ಸರಸ್ವತೀಪುರಂ,**
**ಮೈಸೂರು - 570009.**

# ಶ್ರೀಕೃಷ್ಣದೇವರಾಯನ ತಿರುಮಲೈ ಶಾಸನಂ

| | | |
|---|---|---|
| ಶಾಸನವಿರುವ ಸ್ಥಳ | : | ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲ ಪ್ರಾಕಾರ; ಉತ್ತರದ ಗೋಡೆ) |
| ರಾಜವಂಶ | : | ವಿಜಯನಗರ (ತುಳುವ) ರಾಜ : ಕೃಷ್ಣದೇವರಾಯ |
| ಕಾಲ | : | ಶಾ. ಶ. 1434, ಆಂಗೀರಸ ಸಂವತ್ಸರ, ಫಾಲ್ಗುಣ ಶು. 5<br>= ಕ್ರಿ.ಶ. 1513, ಫೆಬ್ರವರಿ 10, ಗುರುವಾರ |
| ಭಾಷೆ ಮತ್ತು ಲಿಪಿ | : | ತೆಲುಗು; ಕನ್ನಡ |
| ವಿಷಯ | : | ಈ ಶಾಸನವು ಕೃಷ್ಣದೇವರಾಯರ ಮಹಾರಾಣಿ ಚಿಂನಾಜಿಅಮ್ಮನವರು ತಿರುಮಲೈ ದೇವಸ್ಥಾನಕ್ಕೆ ಹೋಗಿ ತಿರುವೇಂಗಳನಾಥ ದೇವರಿಗೆ ಜಿಲಿಪಾಲ ನೈವೇದ್ಯಕ್ಕೆಂದು ಆ ಅವಸರಕ್ಕೆ ಬೇಕಾಗುವ ಚಿನ್ನದ ಬಟ್ಟಲನ್ನು ಅರ್ಪಿಸಿದುದನ್ನು ತಿಳಿಸುತ್ತದೆ. |
| ಆಕರ | : | ತಿ.ತಿ.ದೇ. ಶಾ. ಸಂಪುಟ – III , ನಂ. 41 |

# ಶ್ರೀಕೃಷ್ಣದೇವರಾಯನ ತಿರುಮಲ್ಲೈ ಶಾಸನಂ

| | | |
|---|---|---|
| ಶಾಸನವಿರುವ ಸ್ಥಳ | : | ತಿರುಮಲ್ಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲ ಪ್ರಾಕಾರ; ಉತ್ತರದ ಗೋಡೆ) |
| ರಾಜವಂಶ | : | ವಿಜಯನಗರ (ತುಳುವ) ರಾಜ : ಕೃಷ್ಣದೇವರಾಯ |
| ಕಾಲ | : | ಶಾ. ಶ. 1434, ಆಂಗೀರ ಸಂವತ್ಸರ, ಫಾಲ್ಗುಣ ಶು. 5<br>= ಕ್ರಿ.ಶ. 1513, ಫೆಬ್ರವರಿ 10, ಗುರುವಾರ |
| ಭಾಷೆ ಮತ್ತು ಲಿಪಿ | : | ತೆಲುಗು |
| ವಿಷಯ | : | ಈ ಶಾಸನವು ಕೃಷ್ಣದೇವರಾಯ ಮಹಾರಾಜನ ರಾಣಿ ತಿರುಮಲಮ್ಮ ದೇವಿಯವರು ತಿರುಮಲೆಗೆ ಹೋಗಿ ತಿರುವೇಂಗಳನಾಥ ದೇವರಿಗೆ ನೈವೇದ್ಯಕ್ಕೆ ಇಡಲು ಬೇಕಾಗುವ ಚಿನ್ನದ ಬಟ್ಟಲು ಹಾಗೂ ಪರಿಮಳದ್ರವ್ಯ ಇಡಲು ಬೇಕಾಗುವ ಚಿನ್ನದ ತಟ್ಟೆಯನ್ನು ಸಮರ್ಪಿಸಿದಳು. |
| ಆಕರ | : | ತಿ.ತಿ.ದೇ. ಶಾ. ಸಂಪುಟ – III , ನಂ. 51 |

# ವಿಜಯನಗರ ಕಾಲದ ತಿರುಮಲೈ ಶಾಸನ

ಶಾಸನವಿರುವ ಸ್ಥಳ : ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ಉತ್ತರದ ಗೋಡೆ)

ರಾಜವಂಶ : ವಿಜಯನಗರ (ಸಾಳುವ) ರಾಜ : ಪೆರಿಯ ಮಲ್ಲಯ್ಯ ದೇವಮಹಾರಾಜ

ಕಾಲ : ಶಾ.ಶ. 1368, ಕ್ಷಯ ಸಂವತ್ಸರ; ತುಲಾ ಮಾಸ, ಶು. 5, ಮೃಗಶೀರ್ಷನಕ್ಷತ್ರ, ಸೋಮವಾರ

= ಕ್ರಿ.ಶ. 1446, ಅಕ್ಟೋಬರ್ 10

ಭಾಷೆ ಮತ್ತು ಲಿಪಿ : ತಮಿಳು

ವಿಷಯ : ಈ ಶಾಸನವು ತಾನತ್ತಾರ (ಸ್ಥಾನಾಧಿಕಾರಿಗಳು) ಎಂಬ ದೇವಾಲಯದ ಅಧಿಕಾರಿಗಳ ಮತ್ತು ಎಟ್ಟಿ ಕಂಪದೇವ ಮಹಾರಾಜರ ಪುತ್ರ ಪೆರಿಯ ಮಲ್ಲಯ್ಯ ದೇವಮಹಾರಾಜರ ಮಧ್ಯೆ ಆದ ಒಪ್ಪಂದವನ್ನು ದಾಖಲಿಸಿದೆ. ಪೆರಿಯಮಲ್ಲಯ್ಯ ದೇವಮಹಾರಾಜನು ಶ್ರೀ ಭಂಡಾರದಲ್ಲಿ 1000 ಪಣಮ್ ಹಣವನ್ನು ಠೇವಣಿಯಾಗಿ ಇಟ್ಟು ಅದರ ಮೇಲೆ ಬಂದ ಬಡ್ಡಿಯ ಹಣದಲ್ಲಿ ತಿರುವೇಂಕಟಮ್+ಉಡೈಯಾನರ ದೇವರಿಗೆ ತಿರುಪ್ಪೊನಗಂ ನೈವೇದ್ಯವನ್ನು ಆತನ ಹೆಸರಿನಲ್ಲಿ ನಿತ್ಯ ಅರ್ಪಿಸುವಂತೆ ವಿಜ್ಞಾಪಿಸಿಕೊಂಡನು. ಆ ಪ್ರಸಾದವನ್ನು - 4 ನಾಟಿ - ಸಂಧಿಸಮಯದ ಸೇವಾಕಾಲದಲ್ಲಿ ವಿತರಿಸಬೇಕಿತ್ತು.

ಆಕರ : ತಿ.ತಿ.ದೇ. ಶಾ. ಸಂಪುಟ – I, ನಂ. 210

# ಅಚ್ಯುತರಾಯನ ಕಾಲದ ತಿರುಮಲೈ ಶಾಸನ

| | | |
|---|---|---|
| ಶಾಸನವಿರುವ ಸ್ಥಳ | : | ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ಪದ್ಮಪಟ್ಟಿಕೆಯ ಮೇಲೆ) |
| ರಾಜವಂಶ | : | ವಿಜಯನಗರ ರಾಜ : ಅಚ್ಯುತರಾಯನ ಕಾಲ |
| ಕಾಲ | : | ಶಾ.ಶ. 1454, ನಂದನ ಸಂವತ್ಸರ; ವೃಷಭ ಮಾಸ, ಶು. 11, ಉತ್ತರಟ್ಟಾಡಿ (ಉತ್ತರಾ) ನಕ್ಷತ್ರ, ಸೋಮವಾರ<br>= ಕ್ರಿ.ಶ. 1532, ಏಪ್ರಿಲ್ 30 |
| ಭಾಷೆ ಮತ್ತು ಲಿಪಿ | : | ತಮಿಳು |
| ವಿಷಯ | : | ತಿರುಮಲೈಯದ ತಾನತ್ತಾರರು (ಸ್ಥಾನಾಧಿಕಾರಿಗಳು) ದ್ವಾರಪತಿವೇಳಾರ್ ಮಲೈಪ್ಪೆರುಮಾಳ್ ಅವರ ಪುತ್ರ ಪಿಟ್ಟೈಪೊಱುತ್ತಾರ್ ಎಂಬ ವ್ಯಕ್ತಿಯ ಜೊತೆಗೆ ಮಾಡಿಕೊಂಡ ಒಪ್ಪಂದವನ್ನು ದಾಖಲಿಸಿದೆ. ಆತ ನೆಡುಙ್ಗುನ್‌ಱಂ ಹಳ್ಳಿಯ ನಿವಾಸಿ; ದೇವರಿಗೆ ಎಂದರೆ ಶ್ರೀ ವೇಕಟರಮಣನಿಗೂ ಮತ್ತು ಆತನ ಉತ್ಸವದ ಮೆರವಣಿಗೆಯ ಮೂರ್ತಿ ಮಲೈಕುನಿನ್ಱಪ್ಪೆರುಮಾಳ್ ದೇವರಿಗೆ ತಿರುಮಜ್ಜನ, ತಿರುಪ್ಪೋನಕ ಮುಂತಾದ ಹಲವು ಬಗೆಯ ನೈವೇದ್ಯಗಳನ್ನು ಅರ್ಪಿಸಲು ಸೇವಾ ಕೈಂಕರ್ಯಕ್ಕೆಂದು 5000 ನಱ್‌ಪಣ ಹಣವನ್ನು ಠೇವಣಿಯಾಗಿಟ್ಟನು. ಪ್ರತಿ ತಿಂಗಳು ಆತನು ಹುಟ್ಟಿದ ಆ ಉತ್ತರಾ ನಕ್ಷತ್ರವಿರುವ ದಿವಸ ದೇವರುಗಳಿಗೆ ವಿಶೇಷ ಪೂಜೆಯನ್ನು ಸಲ್ಲಿಸಬೇಕಿತ್ತು. ಇತರ ಹಬ್ಬಗಳಲ್ಲಿಯೂ ಶ್ರೀವಾರಿ ಸ್ವಾಮಿಗೆ ಸೇವೆಗೈಯ್ಯಬೇಕಿತ್ತು. ಸೇವಾ ವಸ್ತುಗಳನ್ನು ಠೇವಣಿಗೆ ಪ್ರತಿಯಾಗಿ ದೇವಸ್ಥಾನವು ಒದಗಿಸಬೇಕಿತ್ತು. |
| ಆಕರ | : | ತಿ.ತಿ.ದೇ. ಶಾ. ಸಂಪುಟ – IV, ನಂ. 15 |

# ನರಸಿಂಹನ ತಿರುಮಲೈ ಶಾಸನಂ

| | | |
|---|---|---|
| ಶಾಸನವಿರುವ ಸ್ಥಳ | : | ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ಉತ್ತರದ ಗೋಡೆ) |
| ರಾಜವಂಶ | : | ವಿಜಯನಗರ (ಸಾಳುವ) ರಾಜ : ನರಸಿಂಹನ ಕಾಲ |
| ಕಾಲ | : | ಶಾ.ಶ. 1389, ಸರ್ವಜಿತ್ ಸಂವತ್ಸರ, ತುಲಾಮಾಸ, ಕೃತ್ತಿಕಾನಕ್ಷತ್ರದ ದಿವಸ, ಬ. 1, ಗುರುವಾರ<br>= ಕ್ರಿ.ಶ. 1467, ಅಕ್ಟೋಬರ್ 15 |
| ಭಾಷೆ ಮತ್ತು ಲಿಪಿ | : | ತಮಿಳು |
| ವಿಷಯ | : | ಈ ಶಾಸನವು ತಾನತ್ತಾರರು (ಸ್ಥಾನಪತಿಗಳು) ತಿಮ್ಮಯ ದೋವಮಹಾರಾಜನೊಂದಿಗೆ ಮಾಡಿಕೊಂಡ ಒಪ್ಪಂದವನ್ನು ದಾಖಲಿಸಿದೆ. ತಿಮ್ಮಯ ದೇವ ಮಹಾರಾಜನು ಗುಂಡಮ ರಾಜವಲ್ಲಭರಾಯನ ಪುತ್ರ. ಈತ ಒಂದಷ್ಟು ಹಣವನ್ನು ಖರ್ಚು ಮಾಡಿ ಕೆರೆಯ ಕಾಲುವೆಯನ್ನು ತೋಡಿಸಿ ನೀರಾವರಿಗೆ ಕಾರಣನಾದನು. ಆ ನೀರಾವರಿಯ ಭೂಮಿಯಲ್ಲಿ ಬಂದ ಬೆಳೆಯನ್ನು - ಆದಾಯವನ್ನು - ತಿರುಪ್ಪೋನಕಂ ನೈವೇದ್ಯಕ್ಕೆ ವಿನಿಯೋಗಿಸಬೇಕಾಗಿತ್ತು, ಯಾವುದನ್ನು ಆತನಿಗೆ ಪುಣ್ಯವಾಗಲೆಂದು ಅರ್ಪಿಸಬೇಕಾಗಿತ್ತು. ನೈವೇದ್ಯದ ವಸ್ತುಗಳನ್ನು ಶ್ರೀ ಭಂಡಾರದಿಂದ ಒದಗಿಸಲ್ಪಡುತ್ತಿತ್ತು. ತಿಮ್ಮಯದೇವ ಮಹಾರಾಜನಿಗೆ 'ಶ್ರೀಮನ್ಮಹಾ ಮಂಡಲೇಶ್ವರ' ಹಾಗೂ 'ಹೊಸಬಿರುದರಗಂಡ' ಎಂಬ ಬಿರುದುಗಳಿವೆ. |
| ಆಕರ | : | ತಿ.ತಿ.ದೇ. ಶಾ. ಸಂಪುಟ – II, ನಂ. 27 |

# ಶ್ರೀಕೃಷ್ಣದೇವರಾಯನ ತಿರುಮಲೈ ಶಾಸನಂ

| | | |
|---|---|---|
| ಶಾಸನವಿರುವ ಸ್ಥಳ | : | ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ದಕ್ಷಿಣ ಗೋಡೆ; ದೇವಾಲಯದ ಮೊದಲ ಪ್ರಾಕಾರ) |
| ರಾಜವಂಶ | : | ವಿಜಯನಗರ (ತುಳುವ) ರಾಜ : ಕೃಷ್ಣದೇವರಾಯ |
| ಕಾಲ | : | ಶಾ. ಶ. 1434, ಆಂಗೀರಸ ಸಂವತ್ಸರ, ಫಾಲ್ಗುಣ ಶು. 5<br>= ಕ್ರಿ.ಶ. 1513, ಫೆಬ್ರವರಿ 10, ಗುರುವಾರ |
| ಭಾಷೆ ಮತ್ತು ಲಿಪಿ | : | ತೆಲುಗು |
| ವಿಷಯ | : | ಶಾಸನವು ರಾಜನು ದೇವಾಲಯಕ್ಕೆ ಹೋಗಿ ತಿರುವೇಂಗಳನಾಥನಿಗೆ ನವರತ್ನ ಖಚಿತ ಕಿರೀಟ ಹಾಗೂ ಇತರ ಆಭರಣಗಳನ್ನು ಸಮರ್ಪಿಸಿದುದನ್ನು ತಿಳಿಸುತ್ತದೆ ಮತ್ತೆ ಆ ಆಭರಣಗಳಲ್ಲಿರುವ ರತ್ನಗಳು, ಮುತ್ತುಗಳು ಹಾಗೂ ಆಭರಣದ ತೂಕವನ್ನೂ ವಿವರಿಸಿದೆ. |
| ಆಕರ | : | ತಿ.ತಿ.ದೇ. ಶಾ. ಸಂಪುಟ – III , ನಂ. 32 |

# ಶ್ರೀಕೃಷ್ಣದೇವರಾಯನ ತಿರುಮಲೈ ಶಾಸನಂ

ಶಾಸನವಿರುವ ಸ್ಥಳ : ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲ ಪ್ರಾಕಾರ; ಉತ್ತರ ಗೋಡೆ)

ರಾಜವಂಶ : ವಿಜಯನಗರ (ತುಳುವ) ರಾಜ : ಕೃಷ್ಣದೇವರಾಯ

ಕಾಲ : ಶಾ. ಶ. 1434, ಆಂಗೀರ ಸಂವತ್ಸರ, ಫಾಲ್ಗುಣ ಶು. 5
= ಕ್ರಿ.ಶ. 1513, ಫೆಬ್ರವರಿ 10, ಗುರುವಾರ

ಭಾಷೆ ಮತ್ತು ಲಿಪಿ : ಕನ್ನಡ; ಕನ್ನಡ

ವಿಷಯ : ಈ ಶಾಸನವು ಕೃಷ್ಣದೇವರಾಯನ ಮಹಾರಾಣಿ ಚಿನ್ನಾಜಿಅಮ್ಮನವರು ತಿರುಮಲ ದೇವಸ್ಥಾನಕ್ಕೆ ಹೋಗಿ ತಿರುವೇಂಗಳನಾಥ ದೇವರಿಗೆ ಜಿಲು (ಚಿಲು) ಪಾಲ ನೈವೇದ್ಯವನ್ನು ಅರ್ಪಿಸಲು ಚಿನ್ನದ ಬಟ್ಟಲನ್ನು ಸಮರ್ಪಿಸಿದ ಳೆಂದು ತಿಳಿಸುತ್ತದೆ. ಬಟ್ಟಲದ ತೂಕವನ್ನು ವಿವರಿಸಿದೆ.

ಆಕರ : ತಿ.ತಿ.ದೇ. ಶಾ. ಸಂಪುಟ – III , ನಂ. 45

# ಶ್ರೀಕೃಷ್ಣದೇವರಾಯನ ತಿರುಮಲೈ ಶಾಸನಂ

| | | |
|---|---|---|
| ಶಾಸನವಿರುವ ಸ್ಥಳ | : | ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲ ಪ್ರಾಕಾರ; ಉತ್ತರದ ಗೋಡೆ) |
| ರಾಜವಂಶ | : | ವಿಜಯನಗರ (ತುಳುವ) ರಾಜ : ಕೃಷ್ಣದೇವರಾಯ |
| ಕಾಲ | : | ಶಾ. ಶ. 1434, ಆಂಗೀರ ಸಂವತ್ಸರ, ಫಾಲ್ಗುಣ ಶು. 5<br>= ಕ್ರಿ.ಶ. 1513, ಫೆಬ್ರವರಿ 10, ಗುರುವಾರ |
| ಭಾಷೆ | : | ಕನ್ನಡ - ತೆಲುಗು, ಮಿಶ್ರ |
| ಲಿಪಿ | : | ಕನ್ನಡ |
| ವಿಷಯ | : | ಈ ಶಾಸನವು ಶ್ರೀಕೃಷ್ಣದೇವರಾಯನ ಮಹಾರಾಣಿ ತಿರುಮಲದೇವಿಯು ತಿರುಮಲೆಗೆ ಹೋಗಿ ತಿರುವೇಂಗಳನಾಥ ದೇವರಿಗೆ ಜಿ (ಚಿ) ಲುಪಾಲ ನೈವೈದ್ಯವನ್ನು ಅರ್ಪಿಸಲು ಸಮರ್ಪಿಸಿದ ಚಿನ್ನದ ಬಟ್ಟಲನ್ನು ಕುರಿತು ವಿವರಿಸಿದೆ. ಪಾತ್ರೆಯ ತೂಕವನ್ನು ನಮೂದಿಸಿದೆ. |
| ಆಕರ | : | ತಿ.ತಿ.ದೇ. ಶಾ. ಸಂಪುಟ - III , ನಂ. 52 |

# ತಿರುಮಲೈಯಲ್ಲಿರುವ ವಿಜಯನಗರ ಶಾಸನ

| | | |
|---|---|---|
| ಶಾಸನವಿರುವ ಸ್ಥಳ | : | ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ಉತ್ತರದ ಗೋಡೆ) |
| ರಾಜವಂಶ | : | ವಿಜಯನಗರ ರಾಜ : |
| ಕಾಲ | : | ಶಾ.ಶ. 1368, ಕ್ಷಯ ಸಂವತ್ಸರ, ಮಿಥುನ ಮಾಸ, ಶು.3, ಮಖಾ(ಘಾ) ನಕ್ಷತ್ರ, ಸೋಮವಾರ = ಕ್ರಿ.ಶ. 1446, ಜೂನ್ 27 |
| ಭಾಷೆ ಮತ್ತು ಲಿಪಿ | : | ತಮಿಳು |
| ವಿಷಯ | : | ಈ ಶಾಸನವು ತಿರುಮಲೈ ದೇವಸ್ಥಾನದ ತಾನತ್ತಾರರು (ಸ್ಥಾನಾಧಿಕಾರಿಗಳು / ಸ್ಥಾನಪತಿಗಳು) ತಿರುಮಲೈಯಲ್ಲಿರುವ ಪಂಗ್ಶೆಯರ್ಚೆಲ್ವಿ ಹೂದೋಟದ ವ್ಯವಸ್ಥಾಪಕ ಎಂಬೆರುಮಾನಾರ್ ಜೀಯರರೊಂದಿಗೆ ಮಾಡಿಕೊಂಡ ಒಪ್ಪಂದವನ್ನು ದಾಖಲಿಸಿದೆ. ಈ ಒಪ್ಪಂದದ ಪ್ರಕಾರ ಎಂಬೆರುಮಾನ್ ಜೀಯರರು ಶ್ರೀ ಭಂಡಾರದಲ್ಲಿ 1000 ಪಣ ಹಣವನ್ನು ಠೇವಣಿಯಾಗಿ ಇಡಬೇಕು ಮತ್ತು ದೇವಸ್ಥಾನವು ಆ ಹಣದ ಮೇಲೆ ಬಂದ ಬಡ್ಡಿಯ ಹಣದಲ್ಲಿ ತಿರುಮಲೈಯಲ್ಲಿ ಶ್ರೀ ವೇಂಕಟಮ್+ಉಡೈಯಾನ್ ದೇವರಿಗೂ ಮತ್ತು ತಿರುಪತಿಯಲ್ಲಿ ಗೋವಿಂದರಾಜಪೆರುಮಾಳ್ ದೇವರಿಗೆ ವೈಕಾಶಿ ಹಾಗೂ ಆಣಿಮಾಸಗಳಲ್ಲಿ ತಿರುನಾಳ್ ಉತ್ಸವಗಳನ್ನೂ ಹಾಗೂ ವಿಶೇಷ ಪೂಜೆಗಳನ್ನೂ ಏರ್ಪಡಿಸಬೇಕಿತ್ತು. ದೇವರಿಗೆ ಅರ್ಪಿಸಿದ ನೈವೇದ್ಯವನ್ನು ಏಕಾಕಿ ಶ್ರೀವೈಷ್ಣವರಿಗೆ ವಿತರಿಸಬೇಕಿತ್ತು. |
| ಆಕರ | : | ತಿ.ತಿ.ದೇ. ಶಾ. ಸಂಪುಟ – I, ನಂ. 221 |

# ವೀರನರಸಿಂಗದೇವನ ತಿರುಮಲೈ ಶಾಸನಂ

ಶಾಸನವಿರುವ ಸ್ಥಳ : ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ಉತ್ತರದ ಗೋಡೆ)

ರಾಜವಂಶ : ಯಾದವರಾಯರು ರಾಜ : ವೀರನರಸಿಂಗದೇವ ಯಾದವರಾಯರು

ಕಾಲ : ಆಳ್ವಿಕೆಯ 40 ನೇ ವರ್ಷ, ರಾಜ : ವೀರನರಸಿಂಗದೇವ ಯಾದವರಾಯರು

ಭಾಷೆ ಮತ್ತು ಲಿಪಿ : ತಮಿಳು

ವಿಷಯ : ಈ ಶಾಸನವು (ನಾಯನಾರ) ರಾಜಾಜ್ಞೆಯೊಂದನ್ನು ದಾಖಲಿಸಿದೆ. ಇದರ ಪ್ರಕಾರ ದೇವಸ್ಥಾನದ ಸ್ಥಾನತ್ತಾರರು ಆ ದೇವಸ್ಥಾನವನ್ನು ತಿರುಪುಲ್ಲಾನಿ ದಾಸನು ಮೊದಲನೆಯ ಪ್ರಾಕಾರದ ಉತ್ತರ ಭಾಗದಲ್ಲಿ ದೇವಸ್ಥಾನದ ಕಟ್ಟಡವನ್ನು ಕಟ್ಟುವದರೊಳಗೆ ದೇವಸ್ಥಾನದಲ್ಲಿ ಇದ್ದ ಎಲ್ಲ ದಾನದತ್ತಿ ಶಾಸನಗಳನ್ನು ಪುನಃ ಪ್ರತಿಮಾಡಿಸಬೇಕು (ಕಲ್ಲಿನ ಚಪಡಿಯಲ್ಲಿ ಕಂಡರಸಿಸಬೇಕು) ಎಂದು ನಾಯನಾರ ದೊರೆ ಆಜ್ಞೆಯನ್ನು ಹೊರಡಿಸಿದನು. ಈ ಆಜ್ಞೆಗನುಗುಣವಾಗಿ ಚೋಳರಾಜ ರಾಜರಾಜನ () ಶಾಸನ (ಕಾಲ : ಕ್ರಿ.ಶ. 1001) ವೊಂದನ್ನು ಯಾವುದು ಚೇರರಾಜನ ಪುತ್ರಿ ದೇವಿ ಅಮ್ಮನಾರರು ಎಂಬಾಕೆ ಇತ್ತ ಆಭರಣಗಳ ವಿವರವನ್ನುಳ್ಳ ಶಾಸನವನ್ನು ಪುನಃ ಕಂಡರಿಸಲಾಗಿದೆ. ಆಕೆ ಚೇರರಾಜನ ಪುತ್ರಿ ಮತ್ತು ಪೊನ್‌ಮಾಳಿಗುಯಿಲ್ ತುಂಜುನದೇವರ ಪತ್ನಿ ಎಂಬುದು ಸ್ಪಷ್ಟವಿದೆ.

ಆಕರ : ತಿ.ತಿ.ದೇ. ಶಾ. ಸಂಪುಟ - I, ನಂ. 88

# ಅಚ್ಯುತರಾಯರ ಕಾಲದ ತಿರುಮಲೈ ಶಾಸನಂ

| | | |
|---|---|---|
| ಶಾಸನವಿರುವ ಸ್ಥಳ | : | ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ಉತ್ತರದ ಗೋಡೆ) |
| ರಾಜವಂಶ | : | ವಿಜಯನಗರ    ರಾಜ : ಅಚ್ಯುತರಾಯರು |
| ಕಾಲ | : | ೦ |
| ಭಾಷೆ ಮತ್ತು ಲಿಪಿ | : | ತಮಿಳು |
| ವಿಷಯ | : | ೦ |
| ಆಕರ | : | ತಿ.ತಿ.ದೇ. ಶಾ. ಸಂಪುಟ – IV, ನಂ. 77 |

# ಅಚ್ಯುತರಾಯರ ಕಾಲದ ತಿರುಮಲೈ ಶಾಸನಂ

ಶಾಸನವಿರುವ ಸ್ಥಳ : ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ಉತ್ತರದ ಗೋಡೆ)

ರಾಜವಂಶ : ವಿಜಯನಗರ ರಾಜ : ಅಚ್ಯುತರಾಯ

ಕಾಲ : -

ಭಾಷೆ ಮತ್ತು ಲಿಪಿ : ತಮಿಳು

ವಿಷಯ : ಅರಮನೆಯ ಅಧಿಕಾರಿ ಪೆರುಜ್ಕೊಣ್ಡೈ (ಪೆನುಗೊಂಡೆ) ವೀರಪ್ಪಣ್ಣನು 10 ಮಾಟ್ಟು ಗುಣಮಟ್ಟದ 330 ಪಗೋಡ ತೂಕದ 5000 ಪಣದ ಬೆಲೆಯ ಬಂಗಾರದ ಬಟ್ಟಲನ್ನು ತಿರುವೇಂಕಟಮ್+ಉಡೈಯಾನ್ ದೇವರಿಗೆ ಅರ್ಪಿಸಿದುದನ್ನು ದಾಖಲಿಸಿದೆ.

ಆಕರ : ತಿ.ತಿ.ದೇ. ಶಾ. ಸಂಪುಟ - IV, ನಂ. 78

# ರಾಜೇಂದ್ರ ಚೋಳ ದೊರೆಯ (I) ತಿರುಮಲೈ ಶಾಸನಂ

ಶಾಸನವಿರುವ ಸ್ಥಳ : ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ಉತ್ತರದ ಗೋಡೆ)

ರಾಜವಂಶ : ಚೋಳ ರಾಜ : ರಾಜೇಂದ್ರ ಚೋಳ (I)

ಕಾಲ : ಆಳ್ವಿಕೆಯ 7 ನೇ ವರ್ಷ, 1ನೇ ವರ್ಷ 7ನೇ ದಿನ =ಕ್ರಿ.ಶ. 1019

ಭಾಷೆ ಮತ್ತು ಲಿಪಿ : ತಮಿಳು

ವಿಷಯ : ಈ ಶಾಸನವು ಕೊಟ್ಟಿಮಂಗಲಮ್ + ಉಡೈಯಾನ್ ದೊರೆಯ ಅಧಿಕಾರಿಯು ತಿರುವೇಂಕಟದೇವರ ದೇವಾಲಯದಲ್ಲಿಇದ್ದ ಧರ್ಮದತ್ತಿಗಳ, ಕೈಂಕರ್ಯಗಳ ಮತ್ತು ಆದತ್ತಿಗಳ ಸೇವಾಗತಿ ಸ್ಥಿತಿಗಳ ಕುರಿತು ನಡೆಸಿದ ವಿಚಾರಣೆಯನ್ನು ದಾಖಲಿಸಿದೆ. ಈ ವಿಚಾರಣೆಯು ತಿರುಮುಂಡಿಯಮ್ ಎಂಬ ಸಭೆಯು ಶಾಸನದಲ್ಲಿ ವಿವರಿಸಿದಂತೆ ಧರ್ಮದತ್ತಿಗಳ ಕಾರ್ಯವನ್ನು ನೆರವೇರಿಸಲಿಲ್ಲ ವೆಂಬುದನ್ನು ಬೆಳಕಿಗೆ ತಂದಿತು. ವಿಚಾರಣಾಧಿಕಾರಿಯು ತಿರುಮುಂಡಿಯಮ್ ಸಭೆಯ ಉಪೇಕ್ಷೆಯನ್ನು ಗುರುತಿಸಿ ಧರ್ಮದತ್ತಿಯ ಹಣವನ್ನು ಸಭೆಯಿಂದ ಶ್ರೀವಾರೀಭಂಡಾರಕ್ಕೆ ಪುನಃ ಹಿಂತಿರುಗಿಸುವಂತೆ ಆಜ್ಞೆಯನ್ನು ಹೊರಡಿಸಿದನು ಮತ್ತು ಸೇವೆಯ ಕೈಂಕರ್ಯವನ್ನು ಹೊರಡಿಸಿದನು ಮತ್ತು ಸೇವೆಯ ಕೈಂಕರ್ಯವನ್ನು ಹೊಣೆಯನ್ನೂ ದೇವಾಲಯದ ಸಿಬ್ಬಂದಿಗೆ ವಹಿಸಿದನು. ದೇವಾಲಯದ ಸಿಬ್ಬಂದಿಯೇ 24 ದೀಪಗಳನ್ನೂ ಹಚ್ಚುವುದು ಮತ್ತು ಒಂದು ಕರ್ಪೂರದಾರತಿಯನ್ನು ಮಾಡಬೇಕೆಂದೂ ನಿರ್ಧರಿಸಲಾಯಿತು.

ಆಕರ : ತಿ.ತಿ.ದೇ. ಶಾ. ಸಂಪುಟ - I, ನಂ. 19

# ಅಚ್ಯುತರಾಯರ ಕಾಲದ ತಿರುಮಲೈ ಶಾಸನ

| | | |
|---|---|---|
| ಶಾಸನವಿರುವ ಸ್ಥಳ | : | ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ದಕ್ಷಿಣದ ಕುಮುದ ಪಟ್ಟಿಕೆ) |
| ರಾಜವಂಶ | : | ವಿಜಯನಗರ    ರಾಜ : ಅಚ್ಯುತರಾಯ |
| ಕಾಲ | : | ಶಾ.ಶ. 1453, ಖರಸಂವತ್ಸರ; ಮೀನಮಾಸ, ಶು. 5, ಅಶ್ವಿನಿ ನಕ್ಷತ್ರ, ಗುರುವಾರ=ಕ್ರಿ.ಶ. 1532, ಮಾರ್ಚ್ 14 |
| ಭಾಷೆ ಮತ್ತು ಲಿಪಿ | : | ತಮಿಳು |
| ವಿಷಯ | : | ಈ ಶಾಸನ, ದೇವಾಲಯದ ಸ್ತಾನತ್ತಾರರು (ಸ್ಥಾನಾಧಿಕಾರಿಗಳು) ಅಪ್ಪರಸರ ಪುತ್ರ ತಮ್ಮಪ್ಪನ್ (ತಿಮ್ಮಪ್ಪನ್) ಜೊತೆಗೆ ಮಾಡಿಕೊಂಡ ಒಪ್ಪಂದವನ್ನು ದಾಖಲಿಸಿದೆ. ಒಪ್ಪಂದದ ಪ್ರಕಾರ ತಮ್ಮಪ್ಪನು ದೇವಾಲಯದ ಭಂಡಾರದಲ್ಲಿ 3000 ಪಣವನ್ನು ತಿರುವೇಂಕಟಮ್ ಉಡೈಯಾನ್ ದೇವರಿಗೆ ಎರಡು ತಿರುಪ್ಪೋನಕ್ಕಂ ನೈವೇದ್ಯ ಅರ್ಪಿಸಲು ಠೇವಣಿಯಾಗಿ ಇಟ್ಟನು. ಆ ಠೇವಣಿಯ ಹಣದಿಂದ ಮಾಧವನ್ ಕಾಲುವೆಯ ಕೆಳಗೆ ಶಿರುಪಾಡಿ ಗ್ರಾಮದಲ್ಲಿ ಒಂದಷ್ಟು ಭೂಮಿಯನ್ನು ಖರೀದಿಸಲಾಯಿತು. ಆ ಭೂಮಿಯ ಫಸಲಿನ ಮೂಲಕ ಬಂದ ಆದಾಯವನ್ನು ದೇವಸ್ಥಾನದ ಭಂಡಾರಕ್ಕೆ ಸೇರಿಸಬೇಕಾಗಿತ್ತು ಮತ್ತು ದೇವಾಲಯವು ಅದಕ್ಕೆ ಪ್ರತಿಯಾಗಿ ಪೂಜೆ ಮತ್ತು ನೈವೇದ್ಯಗಳಿಗೆ ಬೇಕಾದ ವಸ್ತುಗಳನ್ನು ಒದಗಿಸಬೇಕಿತ್ತು. ಕಾಲುಭಾಗ ಪ್ರಸಾದವನ್ನು ಠೇವಣಿಕಾರನಿಗೆ ನೀಡಬೇಕಿತ್ತು. ದೇವಸ್ಥಾನದ ಕರಣಿಕನು ಶಾಸನವನ್ನು ಬರೆದಿದ್ದಾನೆ. |
| ಆಕರ | : | ತಿ.ತಿ.ದೇ. ಶಾ. ಸಂಪುಟ - IV, ನಂ. 13 |

# ಪಾರ್ಥಿವೇಂದ್ರವರ್ಮಣ್ಣನ ತಿರುಮಲೈ ಶಾಸನಂ

| | | |
|---|---|---|
| ಶಾಸನವಿರುವ ಸ್ಥಳ | : | ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ಉತ್ತರದ ಗೋಡೆ) |
| ರಾಜವಂಶ | : | ಪಲ್ಲವ ರಾಜ : ಕೊಪ್ಪಾತ್ರ – ಮಹೇನ್ದ್ರ ಪನ್ಮಾರ್ |
| ಕಾಲ | : | ಆಳ್ವಿಕೆಯ 14 ನೇ ವರ್ಷ |
| ಭಾಷೆ ಮತ್ತು ಲಿಪಿ | : | ತಮಿಳು |
| ವಿಷಯ | : | ಈ ಶಾಸನವು ಪಲ್ಲವದೊರೆ ಕೊಪ್ಪಾತ್ರ ಮಹೇನ್ದ್ರವರ್ಮನ ಕಾಲದ್ದು. ಇದು ಸೋಮವ್ವೆ ಅಪರ ನಾಮಧೇಯ ಕಾಡವನ್ ಪೆರುನ್ದೇವಿಯಾರ್ ಎಂಬ ರಾಣಿ, ಪಲ್ಲವಪ್ಪೇಱ್ಕ್ಕೊಡೆಯಾರ್ (ಪೇಱ್ಕ್ಕೊಡೈಯಾರ್) ರಾಜನ ಪುತ್ರಿಯು ಶ್ರೀ ವೇಂಕಟಮ್ ಸ್ಥಳದಲ್ಲಿ ನಿಲ್ಲಲು ಸಂತೋಷಪಟ್ಟ ದೇವರಿಗೆ ಅನೇಕ ಚಿನ್ನದ ರತ್ನ ಖಚಿತ ಆಭರಣಗಳನ್ನು ಅರ್ಪಿಸಿದಳು ಮತ್ತು ಆಕೆ 3000 ಕುಳಿ ಭೂಮಿಯನ್ನು ಕೊಂಡುಕೊಂಡು ಅದನ್ನು ಕರಮುಕ್ತವನ್ನಾಗಿ ಮಾಡಿಸಿ ಅರ್ಥಾತ್ ಸರ್ವಭಾಧಾ ಪರಿಹಾರವಾಗಿಸಿ ಮಣವಾಳಪ್ಪೆರುಮಾಳ್ ದೇವರಿಗೆ ನೈವೇದ್ಯಾದಿಗಳಿಗೆಂದು, ಅಯನ ಸಂಕ್ರಾಂತಿ, ವಿಷುಸಂಕ್ರಾಂತಿ ಹಾಗೂ ನಂದಾದೀಪಕ್ಕೆಂದು ಧಾರಾದತ್ತಿಯಾಗಿ ಬಿಟ್ಟಳು. ಸಾತ್ತನ್ದೈ ಎಂಬ ವ್ಯಕ್ತಿ ಸಾಕ್ಷಿಯಾಗಿದ್ದಾನೆ. |
| ಆಕರ | : | ತಿ.ತಿ.ದೇ. ಶಾ. ಸಂಪುಟ – I, ನಂ. 8 |

# ಮಲ್ಲಯ್ಯದೇವನ ತಿರುಮಲೈ ಶಾಸನ

| | | |
|---|---|---|
| ಶಾಸನವಿರುವ ಸ್ಥಳ | : | ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ಉತ್ತರದ ಗೋಡೆ) |
| ರಾಜವಂಶ | : | ವಿಜಯನಗರ ರಾಜ : ಮಲ್ಲಯ್ಯದೇವ; ಬುಕ್ಕರಾಯನ ಕಾಲ |
| ಕಾಲ | : | ಶಾ.ಶ. 1372<br>= ಕ್ರಿ.ಶ. 1450 |
| ಭಾಷೆ ಮತ್ತು ಲಿಪಿ | : | ತಮಿಳು |
| ವಿಷಯ | : | ಈ ಶಾಸನ, ತಾನತ್ತಾರರು (ಸ್ಥಾನಾಧಿಕಾರಿಗಳು) ಎಂಪೆರುಮಾನನ್ ಜೀಯರ ಎಂಬುವರೊಂದಿಗೆ ಮಾಡಿಕೊಂಡ ಒಪ್ಪಂದವನ್ನು ದಾಖಲಿಸಿದೆ; ಯಾರು 'ಪಂಗೈಯ್ಯಚ್ಚಿಲ್ವಿ' ಎಂಬ ತಿರುಮಲೆಯ ತೋಟವನ್ನು ಮಾಡಿಸುತ್ತಿದ್ದರು; ಮತ್ತು ಅಲ್ಲಿನ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು. ಅವರು ಪೊಕ್ಕರಾಜನ್ ಸಂಧಿ ಸಮಯದಲ್ಲಿ ತಿರುವೇಂಕಡಮ್ ಉಡೈಯಾರ ದೇವರಿಗೆ ನೈವೇದ್ಯಗಳನ್ನು ಸಮರ್ಪಿಸಲು 2000 ಪಣ ಹಣವನ್ನು ದೇವಾಲಯದ ಭಂಡಾರದಲ್ಲಿ ಠೇವಣಿಯಾಗಿ ಇಟ್ಟರು. ತನ್ನಿಮಿತ್ತ ಆ ನೈವೇದ್ಯದಲ್ಲಿ ಕಾಲುಭಾಗವನ್ನು ಪ್ರಸಾದವೆಂದು ಪಡೆಯಲು ಅವರು ಮತ್ತು ಅವರ ತೋಟದ ಸಿಬ್ಬಂದಿಯೂ ಅರ್ಹತೆಯನ್ನು – ಹಕ್ಕನ್ನು – ಪಡೆದರು. |
| ಆಕರ | : | ತಿ.ತಿ.ದೇ. ಶಾ. ಸಂಪುಟ – I, ನಂ. 218 |

# ಪಾರ್ಥಿವೇಂದ್ರವರ್ಮನ್ನನ ತಿರುಮಲೈ ಶಾಸನಂ

ಶಾಸನವಿರುವ ಸ್ಥಳ : ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ಉತ್ತರದ ಗೋಡೆ)

ರಾಜವಂಶ : ಪಲ್ಲವ ರಾಜ : ಪಾರ್ಥಿವೇಂದ್ರವರ್ಮನ್

ಕಾಲ : ಆಳ್ವಿಕೆಯ 14 ನೇ ವರ್ಷ

ಭಾಷೆ ಮತ್ತು ಲಿಪಿ : ತಮಿಳು

ವಿಷಯ : ಈ ಶಾಸನವು ಸಾಮ (ಸೋಮ) ವೈ ಎಂಬ ಅಪರನಾಮಧೇಯವುಳ್ಳ (ಮತ್ತೊಂದು ಹೆಸರುಳ್ಳ) ಕಾಡವ ಪೆರನ್ದೇವಿಯು 4176$\frac{3}{4}$ ಕುಳಿ ಅಳತೆಯ ಭೂಮಿಯನ್ನು ದತ್ತಿಯಾಗಿ ಕೊಟ್ಟುದನ್ನು ದಾಖಲಿಸಿದೆ. ಈ ದತ್ತಿ ಭೂಮಿಗಳು ತಿರುವೇಂಕಟಮ್ (ಸ್ಥಳ) ದ ದೇವರಿಗೆ ಇಲ್ಲವೇ ವೇಂಕಡಕೋಟ್ಟಮ್ ಪ್ರದೇಶದ ತಿರುಕ್ಕುಡವೂರನಾಡಿನಲ್ಲಿರುವ ತಿರುಚ್ಚುಗನೂರ ಸಭೈಯಾರರಿಗೆ (ಸಭಾಧಿಕಾರಿಗಳಿಗೆ) ಸಂಬಂಧಪಟ್ಟಿದ್ದವು. ಅವನ್ನು ಕಾಡವನ್ ಪೆರುನ್ದೇವಿಯು ಕೊಂಡುಕೊಂಡು ಎಂದರೆ ಅವಕ್ಕೆ ಬೆಲೆಯ ಹಣವನ್ನು ಕೊಟ್ಟು ಆ ಭೂಮಿಗಳನ್ನು ಅದೇ ದೇವಾಲಯಕ್ಕೆ ಪುನಃ ದತ್ತಿಯನ್ನಾಗಿ ನೀಡಿ ಸರ್ವಬಾಧಾಪರಿಹಾರವನ್ನಾಗಿ ಮಾಡಿಸಿ ಕೊಟ್ಟಳು. ಆ ದತ್ತಿ ಭೂಮಿಗಳಿಂದ ಬಂದ ಆದಾಯದಲ್ಲಿ ಶ್ರೀ ವೇಂಕಟಮ್ ಸ್ಥಳದಲ್ಲಿ ಕೃಪೆಯಿಂದ ನಿಂತಿರುವ ಶ್ರೀದೇವರಿಗೂ ಮತ್ತು ಬೆಳ್ಳಿಯ ಮನವಾಳ್‌ಪೇರುಮಾಳ್ ಮೂರ್ತಿಗೂ ಮಾರ್ಗಳಿ ಮುಂದಿನ ಹಬ್ಬದಲ್ಲಿ ವಿಶೇಷಪೂಜೆಗಳನ್ನು ಸಲ್ಲಿಸಬೇಕಿತ್ತು. ದೇವಾಲಯದ ವ್ಯವಸ್ಥಾಪಕರು ಈ ಆಜ್ಞೆಯನ್ನು ಪರಿಪಾಲಿಸುವರು.

ಆಕರ : ತಿ.ತಿ.ದೇ. ಶಾ. ಸಂಪುಟ - I, ನಂ. 9

# ಅಚ್ಯುತರಾಯರ ಕಾಲದ ತಿರುಮಲೈ ಶಾಸನ

| | | |
|---|---|---|
| ಶಾಸನವಿರುವ ಸ್ಥಳ | : | ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ಉತ್ತರದ ಗೋಡೆ) |
| ರಾಜವಂಶ | : | ವಿಜಯನಗರ ರಾಜ : ಅಚ್ಯುತರಾಯನ ಕಾಲ |
| ಕಾಲ | : | ಶಾ.ಶ. 1460, ವಿಳಂಬಿ ಸಂವತ್ಸರ; ಮಕರ (ತೈ) ಮಾಸ, ಪೂರ್ಣಿಮಾ ತಿಥಿ, ಶನಿವಾರ, ಪುನರ್ವಸು ನಕ್ಷತ್ರ<br>=ಕ್ರಿ.ಶ. 1539, ಜನವರಿ 4 |
| ಭಾಷೆ ಮತ್ತು ಲಿಪಿ | : | ತಮಿಳು |
| ವಿಷಯ | : | ಈ ಶಾಸನವು, ಲೇಪಾಕ್ಷಿಯ ನಂದಿಲಕ್ಕಿ ಚೆಟ್ಟಿಯರ ಪುತ್ರ ಪೆರುಙ್ಕೊಣ್ಡೈ (ಪೆನುಗೊಂಡೆಯ) ವೀರಪ್ಪಣ್ಣನ್ ಎಂಬವನು ದೇವಾಲಯದ ಭಂಡಾರದಲ್ಲಿ 2000 ರೇಖೈಪೊನ್ (ಚಿನ್ನದ) ನಾಣ್ಯಗಳನ್ನು ತಿರುವೇಂಕಟಮ್ ಉಡೈಯಾನ್ ದೇವರಿಗೆ ಅತಿರಸಪಡಿ ನೈವೇದ್ಯಕ್ಕೆಂದು ಠೇವಣಿಯಾಗಿ ಇಟ್ಟಿದ್ದನ್ನು ದಾಖಲಿಸಿದೆ. ತಾನತ್ತಾರರು (ಸ್ಥಾನಾಧಿಕಾರಿಗಳು) ಆ ಠೇವಣಿಗೆ ಪ್ರತಿಯಾಗಿ ಶ್ರೀವಾರಿ ಕೈಂಕರ್ಯವನ್ನು ನಿರ್ವಹಿಸಬೇಕಿತ್ತು. ಠೇವಣಿದಾರನು ಮತ್ತು ಆತನ ವಂಶಸ್ಥರು ಆ ನೈವೇದ್ಯದ $\frac{1}{4}$ ಭಾಗವನ್ನು ಪ್ರಸಾದವೆಂದು ಆಚಂದ್ರಾರ್ಕತಾರಾಂಬರ ಕಾಲ ಪಡೆಯುವ ಹಕ್ಕನ್ನು ಹೊಂದಿದ್ದರು ಮಿಕ್ಕುದನ್ನು ದೇವಾಲಯಕ್ಕೆ ಬಂದ ಭಕ್ತರಿಗೆ ವಿತರಿಸಬಹುದಾಗಿತ್ತು. |
| ಆಕರ | : | ತಿ.ತಿ.ದೇ. ಶಾ. ಸಂಪುಟ – IV, ನಂ. 119 |

# ಅಚ್ಯುತರಾಯರ ಕಾಲದ ತಿರುಮಲೈ ಶಾಸನ

ಶಾಸನವಿರುವ ಸ್ಥಳ : ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ಉತ್ತರದ ಗೋಡೆ)

ರಾಜವಂಶ : ವಿಜಯನಗರ ರಾಜ : ಅಚ್ಯುತರಾಯನ ಕಾಲ

ಕಾಲ : ಶಾ.ಶ. 1461, ವಿಕಾರಿ ಸಂವತ್ಸರ; ಮಾಸಿ ಮಾಸದ ಮೊದಲನೆಯ ದಿನ =ಕ್ರಿ.ಶ. 1541, ಜನವರಿ 27

ಭಾಷೆ ಮತ್ತು ಲಿಪಿ : ತಮಿಳು

ವಿಷಯ : ಈ ಶಾಸನವು, ಪೆರುಙ್ಕೊಣ್ಡೈ (ಪೆನುಗೊಂಡೆ) ವೀರಪ್ಪಣ್ಣನ್ ತಿರುವೇಂಕಟಮ್ - ಉಡೈಯಾನ್ ದೇವರಿಗೆ ಬೆಳ್ಳಿಯ ತಟ್ಟೆ ಹಾಗೂ ಬಟ್ಟಲಗಳನ್ನು ಅರ್ಪಿಸಿದುದನ್ನು ದಾಖಲಿಸಿದೆ. ಇದರಲ್ಲಿ ಪಾತ್ರೆಗಳ ತೂಕ ವನ್ನೂ ನಮೂದಿಸಿದೆ. ದಾನವನ್ನು ವಿಕಾರಿಸಂವತ್ಸರದ ಮಾಸಿ ಮಾಸದ ಮೊದಲನೆಯ ದಿನದಂದು ನೀಡಲಾಗಿದೆ.

ಆಕರ : ತಿ.ತಿ.ದೇ. ಶಾ. ಸಂಪುಟ – IV, ನಂ. 141

# ನರಸಿಂಹನ ತಿರುಮಲೈ ಶಾಸನಂ

ಶಾಸನವಿರುವ ಸ್ಥಳ : ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ಉತ್ತರದ ಗೋಡೆ)

ರಾಜವಂಶ : ವಿಜಯನಗರ (ಸಾಳುವ) ರಾಜ : ನರಸಿಂಹ

ಕಾಲ : ಶಾ.ಶ. 1389, ಸರ್ವಜಿತ್ ಸಂವತ್ಸರ, ಮೇಷಮಾಸ, ಉತ್ತರಾಷಾಢ ನಕ್ಷತ್ರ, ಬ. ಷಷ್ಟಿ, (6) ಆದಿತ್ಯವಾರ
= ಕ್ರಿ.ಶ. 1467, ಏಪ್ರಿಲ್ 25

ಭಾಷೆ ಮತ್ತು ಲಿಪಿ : ತಮಿಳು

ವಿಷಯ : ತಿರುಮಲೈ ದೇವಸ್ಥಾನದ ತಾನತ್ತಾರರು (ಸ್ಥಾನಪತಿಗಳು) ರಾಮಾನುಜಕೂಟದ (ಸತ್ರದ) ವ್ಯವಸ್ಥಾಪಕ ಕಂದಾಡೈ ರಾಮಾನುಜ ಅಯ್ಯಂಗಾರ್ ಎಂಬುವರೊಂದಿಗೆ ಮಾಡಿಕೊಂಡ ಒಪ್ಪಂದವನ್ನು ಈ ಶಾಸನವು ದಾಖಲಿಸಿದೆ. ಕಂದಾಡೈ ರಾಮಾನುಜ ಅಯ್ಯಂಗಾರ್ ಅವರು ಅಟಿಘೈಮಣವಾಳ ಜೀಯರರ ಅನುಯಾಯಿಗಳಾಗಿದ್ದರು; ಮತ್ತು ತಮ್ಮ ಹಣವನ್ನು ಎರಡು ಕಾಲುವೆಗಳನ್ನು ತೊಡಲು ತೊಡಗಿಸಿದ್ದರು. ಈ ನೀರಾವರಿಯಿಂದ ಕೋಟ್ಟಿಮಂಗಲಂ ಹಾಗೂ ಕೂರೈಗ್ರಾಮಗಳಲ್ಲಿ ಬಂದ ಬೆಳೆಯನ್ನು - ಆದಾಯವನ್ನು- ನರಸಿಂಗರಾಜನ್ - ಉಡೈಯಾರ ಸಂಧಿ ಸಮಯದ ಸೇವೆಗೆ - ಕೈಂಕರ್ಯಕ್ಕೆ - ಬಳಸಬೇಕಿತ್ತು ; ಎಂದರೆ 'ಅಪ್ಪಪಡಿ' ಹಾಗೂ 'ತಿರುಕ್ಕಾಣಮಡೈ' ನೈವೇದ್ಯಕ್ಕೆ ಉಪಯೋಗಿಸಬೇಕಾಗಿತ್ತು, ಆನಂತರ ಆ ಪ್ರಸಾದವಿತರಣೆ.

ಆಕರ : ತಿ.ತಿ.ದೇ. ಶಾ. ಸಂಪುಟ – II, ನಂ. 26

# ನರಸಿಂಹನ ಕಾಲದ ತಿರುಮಲೈ ಶಾಸನಂ

ಶಾಸನವಿರುವ ಸ್ಥಳ : ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ಉತ್ತರದ ಗೋಡೆ)

ರಾಜವಂಶ : ವಿಜಯನಗರ (ಸಾಳುವ) ರಾಜ : ನರಸಿಂಹ

ಕಾಲ : ಶಾ.ಶ. 1386, ತಾರಣನಾಮ ಸಂವತ್ಸರ, ಮಕರಮಾಸ, ಚಿತ್ತಿರೈ ನಕ್ಷತ್ರ, ಬ. 6, ಶುಕ್ರವಾರ = ಕ್ರಿ.ಶ. 1465, ಜನವರಿ 18

ಭಾಷೆ ಮತ್ತು ಲಿಪಿ : ತಮಿಳು

ವಿಷಯ : ಈ ಶಾಸನವು ತಿರುಮಲೈ ದೇವಾಲಯದ ತಾನತ್ತಾರರು (ಸ್ಥಾನಪತಿಗಳು) ಕಂದಾಡೈ ರಾಮಾನುಜ ಅಯ್ಯಂಗಾರ್ ಅವರೊಂದಿಗೆ ಮಾಡಿ ಕೊಂಡ ಒಪ್ಪಂದವನ್ನು ದಾಖಲಿಸಿದೆ. ಈ ಒಪ್ಪಂದದ ಪ್ರಕಾರ ರಾಮಾನುಜಯ್ಯಂಗಾರರಿಗೆ ರಾಮಾನುಜ ಕೂಟಕ್ಕೆಂದು ಯಾವುದು ಸನ್ನಿಧಿಯಲ್ಲಿದ್ದಿತೋ ಅದರಲ್ಲಿ ಸತ್ರವನ್ನು ನಡೆಸಲು ಒಪ್ಪಿಗೆಯನ್ನು ನೀಡಲಾಗಿತ್ತು. ಅವರು ಅಟಿಗಪ್ಪಿರನಾರ್ ದೇವರ ಅಭ್ಯಂಜನ (ತಿರುಮಜ್ಜನ) ಕೈಂಕರ್ಯವನ್ನು ನಿರ್ವಹಿಸಬೇಕಾಗಿತ್ತು.

ಆಕರ : ತಿ.ತಿ.ದೇ. ಶಾ. ಸಂಪುಟ – II, ನಂ. 22

# ಸಾಳುವ ನರಸಿಂಹನ ಕಾಲದ ತಿರುಮಲೈ ಶಾಸನ

ಶಾಸನವಿರುವ ಸ್ಥಳ : ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ಉತ್ತರದ ಗೋಡೆ)

ರಾಜವಂಶ : ವಿಜಯನಗರ ರಾಜ : ಸಾಳುವ ನರಸಿಂಹ

ಕಾಲ : ಶಾ.ಶ. 1391
= ಕ್ರಿ.ಶ. 1469

ಭಾಷೆ ಮತ್ತು ಲಿಪಿ : ತಮಿಳು

ವಿಷಯ : ಈ ಶಾಸನವು ತಾನತ್ತಾರರು (ಸ್ಥಾನಪತಿಗಳು) ಮತ್ತು ಕಂದಾಡೈ ರಾಮಾನುಜ ಅಯ್ಯಂಗಾರ್ ಇವರ ಮಧ್ಯೆ ಜರುಗಿದ ಒಂದು ಒಪ್ಪಂದವನ್ನು ದಾಖಲಿಸಿದೆ. ರಾಮಾನುಜ ಅಯ್ಯಂಗಾರರು ತಿರುಮಲೈ ತಿರುಪತಿಯಲ್ಲಿಯ ರಾಮಾನುಜ ಕೂಟದ (ಸಂಸ್ಥೆಯ) ವ್ಯವಸ್ಥಾಪಕರಾಗಿದ್ದರು. ಅವರು ತಮ್ಮ ಸ್ವಂತ ಹಣದಿಂದ ಪಾನಗಂ ಹತ್ತಿರ ಭೂಮಿಯನ್ನು ಕೊಂಡುಕೊಂಡು ಅದಕ್ಕೆ ಕಾಲುವೆ ತೋಡಿಸಿ ನೀರಿನ ವ್ಯವಸ್ಥೆಯನ್ನು ಮಾಡಿದರು. ಆ ಕೃಷಿಯಿಂದ ಬಂದ ಆದಾಯದಲ್ಲಿ ದೇವರಿಗೆ ಪ್ರತಿನಿತ್ಯ ಸಂಜೆಯ ನೈವೇದ್ಯಕ್ಕೆ ಏರ್ಪಾಡು ಮಾಡಿದರು. ತುಪ್ಪ, ಬೇಳೆ, ಹಾಲು, ತರಕಾರಿ (ಕಾಯಿಪಲ್ಲೆ), ಕಾಳುಮೆಣಸು ಇತ್ಯಾದಿಗಳನ್ನು ಹೊಂದಿಸುವುದು ಮತ್ತು ನಂದಾದೀವಿಗೆ ಇಡುವುದನ್ನು ಕೂಡ ದಾಖಲೆಯಲ್ಲಿ ಬರೆದಿದೆ. ಇದಲ್ಲದೆ ಅವರು ಏಳುನೂರು ಪಣಂ ಹಣವನ್ನು ಕೊಟ್ಟು ಆವಿಲಾಲಿಯಲ್ಲಿ ಕಿಳೈಪೂತ್ತೈಪಟ್ಟು ಬಳಿ ಭೂಮಿಯನ್ನು ಖರೀದಿಸಿ ಅದರ ಫಸಲಿನ ಆದಾಯದಿಂದ ದೇವಾಲಯಕ್ಕೆ ಕರ್ಪೂರವನ್ನು ಒದಗಿಸಲು ಏರ್ಪಾಡು ಮಾಡಿದರು. ತನ್ನಿಮಿತ್ತ ಅವರು ದೇವರಿಗೆ ಅರ್ಪಿಸಿದ ಪ್ರಸಾದವನ್ನು ಪಡೆಯುವ ಹಕ್ಕನ್ನು ಹೊಂದಿದ್ದರು.

ಆಕರ : ತಿ.ತಿ.ದೇ. ಶಾ. ಸಂಪುಟ – II, ನಂ. 40

# ವಿಜಯನಗರ ಕಾಲದ ತಿರುಮಲೈ ಶಾಸನ

| | | |
|---|---|---|
| ಶಾಸನವಿರುವ ಸ್ಥಳ | : | ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ಉತ್ತರದ ಗೋಡೆ) |
| ರಾಜವಂಶ | : | ವಿಜಯನಗರ ರಾಜ : |
| ಕಾಲ | : | ಶಾ.ಶ. 1368, = ಕ್ರಿ.ಶ. 1446 |
| ಭಾಷೆ ಮತ್ತು ಲಿಪಿ | : | ತಮಿಳು |
| ವಿಷಯ | : | ಈ ಶಾಸನವು ತಾನತ್ತಾರರು (ಸ್ಥಾನಾಧಿಕಾರಿಗಳು) ಮತ್ತು ಎಂಬುರುಮಾನ್ ಜೀಯರ್ ಅವರ ಮಧ್ಯೆ ಜರುಗಿದ ಒಪ್ಪಂದವನ್ನು ದಾಖಲಿಸಿದೆ. ಅವರು ದೇವಸ್ಥಾನದ ಭಂಡಾರದಲ್ಲಿ 1000 ಪಣ ಹಣವನ್ನು ದೇವಸ್ಥಾನದಲ್ಲಿ ಮತವ್ರತ ಉತ್ಸವ ಹಬ್ಬ ಹರಿದಿನಗಳ ಆಚರಣೆಯನ್ನು ಆಚರಿಸಲು ಠೇವಣಿಯಾಗಿ ಇಟ್ಟಿದ್ದರು. ನೈವೇದ್ಯಕ್ಕೆ ಬೇಕಾಗುವ ವಸ್ತುಗಳ ಹಾಗೂ ತಿರುಕಣ್ರ ಮಾಡೈ, ಅಪ್ಪಂ ಇತ್ಯಾದಿ ಭಕ್ಷಗಳ ವಿವರವೂ ಇದೆ. ದೇವಾಲಯದಲ್ಲಿ ನೆರವೇರಿಸುವ ಧ್ವಜಾರೋಹಣ, ವೈಕಾಶಿ (ವೈಶಾಖ) ಆಣಿ (ಶ್ರಾವಣ) ಇತ್ಯಾದಿ ಮಾಸಗಳಲ್ಲಿ ತಿರುವೇಂಕಟಂ ಉಡೈಯಾನ್ ಹಾಗೆಯೇ ಗೋವಿಂದರಾಜಪ್ಪೆರುಮಾಳ್ ದೇವರುಗಳಿಗೆ ವಿಶೇಷ ಪೂಜೆ ಹಾಗೂ ನೈವೇದ್ಯಗಳನ್ನು ಸಲ್ಲಿಸಬೇಕಾಗಿತ್ತು. ದಾನಿಯು ಕಾಲು ಪ್ರಸಾದ ಭಾಗವನ್ನು ಪಡೆಯಲು ಅಧಿಕಾರ ಹೊಂದಿದ್ದನು. |
| ಆಕರ | : | ತಿ.ತಿ.ದೇ. ಶಾ. ಸಂಪುಟ – I, ನಂ. 221 |

# ನರಸಿಂಹನ ಕಾಲದ ತಿರುಮಲೈ ಶಾಸನಂ

ಶಾಸನವಿರುವ ಸ್ಥಳ : ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ಪಶ್ಚಿಮದ ಗೋಡೆ)

ರಾಜವಂಶ : ವಿಜಯನಗರ (ಸಾಳುವ) ರಾಜ : ನರಸಿಂಹನ ಕಾಲ

ಕಾಲ : ಶಾ.ಶ. 1393, ಖರ ಸಂವತ್ಸರ, ಮಕರ ಮಾಸ, ರೋಹಿಣಿ ನಕ್ಷತ್ರ, ಚಾಂದ್ರ ಶು. 10, ಸೋಮವಾರ
= ಕ್ರಿ.ಶ. 1472, ಜನವರಿ 20

ಭಾಷೆ ಮತ್ತು ಲಿಪಿ : ತಮಿಳು

ವಿಷಯ : ಈ ಶಾಸನವು ತಿರುಮಲೈ ಸ್ಥಾನತ್ತಾರರು ಪುಲ್ಲಗಣ್ಣಂ ತಿರುವೇಂಕಟದಾಸನೊಂದಿಗೆ ಮಾಡಿಕೊಂಡ ಒಪ್ಪಂದವನ್ನು ದಾಖಲಿಸಿದೆ. ಆತ ಸಿಂಗರ್ ಕೋಯಿಲ್ ಬೀದಿಯಲ್ಲಿ ವಾಸಿಸುತ್ತಿದ್ದನು. ನರಸಿಂಗರಾಜ ಉಡೈಯಾರ್ ಅವರ ಆಜ್ಞೆಗೆ ಅನುಸಾರವಾಗಿ ಪ್ರಸಾದವನ್ನು ಆತನಿಗೂ ಆತನ ವಂಶಸ್ಥರಿಗೂ ವಿತರಿಸಲಾಗುವುದೆಂದು ಅದು ಸೂರ್ಯ-ಚಂದ್ರರು ಇರುವವರೆಗೆ ಮುಂದುವರೆಯುವದೆಂದು ನಿರ್ದೇಶಿಸಲಾಗಿದೆ.

ಆಕರ : ತಿ.ತಿ.ದೇ. ಶಾ. ಸಂಪುಟ – II, ನಂ. 48

# ತಿರುಮಲೈ ಶಾಸನ

ಶಾಸನವಿರುವ ಸ್ಥಳ : ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ಪಶ್ಚಿಮದ ಗೋಡೆ)

ರಾಜವಂಶ : ರಾಜ :

ಕಾಲ : ಶಾ.ಶ. 1367,

= ಕ್ರಿ.ಶ. 1445

ಭಾಷೆ ಮತ್ತು ಲಿಪಿ : ತಮಿಳು

ವಿಷಯ : ಈ ಶಾಸನವು ತಾನತ್ತಾರರು (ಸ್ಥಾನಾಧಿಕಾರಿಗಳು) ಮತ್ತು ಅನಂತಶಯನಮ್ ಅವರ ಮಧ್ಯೆ ಆದ ಒಪ್ಪಂದವನ್ನು ದಾಖಲಿಸಿದೆ. ಆತನು ದೇವಸ್ಥಾನಕ್ಕೆ 300 ಪಣ ಹಣವನ್ನು ದಾನವನ್ನಾಗಿತ್ತನು. ಅದಕ್ಕೆ ಪ್ರತಿಯಾಗಿ 'ಧ್ವಜಾರೋಹಣ' ಉತ್ಸವ ಕಾಲದಲ್ಲಿ ತಿರುವೇಂಕಟವಮ್+ಉಡೈಯಾನ್ ಹಾಗೂ ಗೋವಿಂದರಾಜಪ್ಪೆರುಮಾಳ್ ದೇವರ ದೇವಾಲಯಗಳಲ್ಲಿ 'ಸುಕಿಯನ್' ತಿರುಕ್ಕಣಾಮೇಡೈ (ಮೂಡೈ) ಮತ್ತು ಇತರ ಭಕ್ಷ್ಯ ಭೋಜ್ಯಗಳ ನೈವೇದ್ಯಕ್ಕೆಂದು ವಸ್ತುಗಳನ್ನು ದೇವಾಲಯವು ಹೊಂದಿಸಬೇಕಿತ್ತು. ದೇವರ ಪ್ರಸಾದವನ್ನು ದಾನಿಗೂ ಮತ್ತು ಇತರ ಭಕ್ತರಿಗೂ ವಿತರಿಸಬೇಕಿತ್ತು.

ಆಕರ : ತಿ.ತಿ.ದೇ. ಶಾ. ಸಂಪುಟ – I, ನಂ. 223

# ನರಸಿಂಹನ ತಿರುಮಲೈ ಶಾಸನಂ

| | | |
|---|---|---|
| ಶಾಸನವಿರುವ ಸ್ಥಳ | : | ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ಪಶ್ಚಿಮದ ಗೋಡೆ) |
| ರಾಜವಂಶ | : | ವಿಜಯನಗರ (ಸಾಳುವ) ರಾಜ : ನರಸಿಂಹನ ಕಾಲ |
| ಕಾಲ | : | ಶಾ.ಶ. 1380, ಬಹುಧಾನ್ಯ ಸಂವತ್ಸರ, ಮಿಥುನ ಮಾಸ, ಮೂಲಾ ನಕ್ಷತ್ರ, ಆದಿತ್ಯವಾರ = ಕ್ರಿ.ಶ. 1458, ಜೂನ್ 25, ಆದಿತ್ಯವಾರ |
| ಭಾಷೆ ಮತ್ತು ಲಿಪಿ | : | ತಮಿಳು |
| ವಿಷಯ | : | ಈ ಶಾಸನವು ತಿರುಮಲೈ ದೇವಸ್ಥಾನದ ವಿಶ್ವಸ್ಥಮಂಡಲಿಯ ಸದಸ್ಯರು ಮತ್ತು ಪೀಠಾಧಿಪತಿ ಪೆರಿಯಾರ್ ಪೇರುಮಾಳ್ ಜೀಯರ್ ಅವರುಗಳ ಮಧ್ಯೆ ಏರ್ಪಟ್ಟ ಒಪ್ಪಂದವನ್ನು ದಾಖಲಿಸಿದೆ. ಪೇರುಮಾಳ್ ಜೀಯರ್ ಅವರು ದೇವಾಲಯದ ತೋಟದ ವ್ಯವಸ್ಥಾಪಕರ ಅಧಿಕಾರವನ್ನು ಹೊಂದಿದ್ದರು. ಅವರು ಶ್ರೀಭಂಡಾರದಲ್ಲಿ ತಮ್ಮ ಹೆಸರಿನಲ್ಲಿ ತಿರುವೇಂಕಟಮ್ ಉಡೈಯಾನ್ ದೇವರಿಗೆ ತಿರುಪ್ಪೋನಕ ನೈವೇದ್ಯಕ್ಕೆಂದು 2000 ಪಣಗಳ ಠೇವಣಿಯನ್ನು ಇಟ್ಟು ಅದರ ಬಡ್ಡಿಯಲ್ಲಿ ಶ್ರೀವಾರಿ ಕೈಂಕರ್ಯವು ನಡೆಯಬೇಕೆಂದು ನಿಶ್ಚಯಿಸಿದರು. ಅವರಿಗೆ ಅವರ ಜೀವಮಾನದ ಅವಧಿ ಪರ್ಯಂತ ಪ್ರಸಾದವನ್ನು ಪಡೆಯುವ ಅವಕಾಶ - ಅಧಿಕಾರ - ಇದ್ದಿತು; ಮರಣದ ಅನಂತರದಲ್ಲಿ ಅವರ ಕಾರ್ಯವನ್ನು ನಿರ್ವಹಿಸುವ ಏಕಾಕಿ ವೈಷ್ಣವ ವ್ಯಕ್ತಿಗೆ ಆ ಪ್ರಸಾದವನ್ನು ಸ್ವೀಕರಿಸುವ ಅಧಿಕಾರ (ಹಕ್ಕು) ಇದ್ದಿತು. |
| ಆಕರ | : | ತಿ.ತಿ.ದೇ. ಶಾ. ಸಂಪುಟ – II, ನಂ. 7 |

# ಶ್ರೀಕೃಷ್ಣದೇವರಾಯನ ತಿರುಮಲೈ ಶಾಸನಂ

ಶಾಸನವಿರುವ ಸ್ಥಳ : ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲ ಪ್ರಾಕಾರ; ದಕ್ಷಿಣದ ಗೋಡೆ)

ರಾಜವಂಶ : ವಿಜಯನಗರ (ತುಳುವ) ರಾಜ : ಕೃಷ್ಣದೇವರಾಯ

ಕಾಲ : ಶಾ. ಶ. 1435, ಶ್ರೀಮುಖ ಸಂವತ್ಸರ, ವೈಶಾಖ ಬಹುಳ 12, ಸೋಮವಾರ = ಕ್ರಿ.ಶ. 1513, ಮೇ 2, ಸೋಮವಾರ

ಭಾಷೆ : ಕನ್ನಡ

ಲಿಪಿ : ಕನ್ನಡ

ವಿಷಯ : ಈ ಶಾಸನವು ಶ್ರೀಕೃಷ್ಣದೇವರಾಯ ಮಹಾರಾಯನು ತಿರುವೇಂಗಳನಾಥ ದೇವರಿಗೆ ಅರ್ಪಿಸಿದ ಆಭರಣಗಳನ್ನು, ಅವುಗಳಲ್ಲಿ ಆಳವಡಿಸಿದ ಅಮೌಲ್ಯ ರತ್ನಗಳು, ಮುತ್ತುಗಳು ಎಷ್ಟೆಂಬ ವಿವರವನ್ನು ಮತ್ತು ತೂಕಗಳನ್ನೂ ವಿಸ್ತಾರವಾಗಿ ನಿರೂಪಿಸಿದೆ. ಈ ಕಾರ್ಯಕ್ಕಾಗಿ ರಾಜನು ತಿರುಮಲೈ ದೇವಸ್ಥಾನಕ್ಕೆ ಬಿಜಯಂಗೈಸಿದ್ದನು.

ಆಕರ : ತಿ.ತಿ.ದೇ. ಶಾ. ಸಂಪುಟ – III , ನಂ. 62

# ಅಚ್ಯುತರಾಯನ ಕಾಲದ ತಿರುಮಲೈ ಶಾಸನ

ಶಾಸನವಿರುವ ಸ್ಥಳ : ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ಉತ್ತರದ ಗೋಡೆ)

ರಾಜವಂಶ : ವಿಜಯನಗರ ರಾಜ : ಅಚ್ಯುತರಾಯನ ಕಾಲ

ಕಾಲ : ಶಾ.ಶ. 1459, ನಂದನ ಸಂವತ್ಸರ; ಕಟಕ ಮಾಸ, ಶು. 5, ಬುಧವಾರ, ಉತ್ತರಾನಕ್ಷತ್ರ (ಉತ್ತಿರಂ)
=ಕ್ರಿ.ಶ. 1537, ಜುಲೈ 11

ಭಾಷೆ ಮತ್ತು ಲಿಪಿ : ತಮಿಳು

ವಿಷಯ : ಈ ಶಾಸನವು ತಾನತ್ತಾರರು (ಸ್ಥಾನಾಧಿಕಾರಿಗಳು) ಮತ್ತು ದೇವಾರಪತಿ ವೇಳಾರ್ ಮಲೈಪ್ಪೆರುಮಾಳ್ ಅವರ ಪುತ್ರ ತಿರುಮಲೈನಾಥ ಪಿಳ್ಳೈ ಅವರೊಂದಿಗೆ ಮಾಡಿಕೊಂಡ ಒಪ್ಪಂದವನ್ನು ದಾಖಲಿಸಿದೆ. ಆತ ಮುರುಗ (ಮುಂಗ?) ಮಂಗಳಪ್ಪಟ್ಟುವಿಗೆ ಸೇರಿದ ನೆಡುಜುಗ್ಗನ್ಗಂ ಸ್ಥಳದ ನಿವಾಸಿ. ದೇವಾಲಯದಲ್ಲಿ ಅನೇಕ ಪೂಜೆ ಹಾಗೂ ಉತ್ಸವಗಳನ್ನು ಏರ್ಪಡಿಸಲು ಆತ ಅಲ್ಲಿನ ಭಂಡಾರದಲ್ಲಿ 5700 ಪಣ ಹಣವನ್ನು ಠೇವಣಿಯಾಗಿ ಇಟ್ಟನು. ಈ ಉತ್ಸವಗಳನ್ನು ಆ ದೇವರ ಜನ್ಮದಿನ ಅಥವಾ ಜನ್ಮ ನಕ್ಷತ್ರ ತಿರುವೇಣ್ ನಕ್ಷತ್ರವಿದ್ದ ದಿವಸಗಳಂದು ಆಚರಿಸಬೇಕಿತ್ತು. ಆ ಕೈಂಕರ್ಯಗಳಲ್ಲಿ ಅಭಿಷೇಕ (ತಿರುಮಜ್ಜನ) ಹಾಗೂ ವಿವಿಧ ಬಗೆಯ ನೈವೇದ್ಯಗಳನ್ನು ಅರ್ಪಿಸುವುದು ಒಳಗೊಂಡಿತ್ತು. ವಸ್ತುಗಳ ದೀರ್ಘವಾದ ಪಟ್ಟಿ ಇದೆ. ಠೇವಣಿಯ ಹಣವನ್ನು ದೇವಾಲಯದ ಹಳ್ಳಿಗಳಲ್ಲಿರುವ ಕೆರೆ ಮತ್ತು ಕಾಲುವೆಗಳ ದುರಸ್ತಿಗೆ ಬಳಸಲು ಮತ್ತು ಆನಂತರ ಬಂದ ಫಸಲಿನ ಆಧಾಯದಲ್ಲಿ ಉತ್ಸವಗಳನ್ನು ಏರ್ಪಡಿಸಬೇಕೆಂಬುದನ್ನೂ ಶಾಸನದಲ್ಲಿ ಬರೆದಿದೆ.

ಆಕರ : ತಿ.ತಿ.ದೇ. ಶಾ. ಸಂಪುಟ – IV, ನಂ. 99

# ವಿಜಯನಗರ ಕಾಲದ ತಿರುಮಲೈ ಶಾಸನ

| | | |
|---|---|---|
| ಶಾಸನವಿರುವ ಸ್ಥಳ | : | ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ |
| ರಾಜವಂಶ | : | ವಿಜಯನಗರ ರಾಜ : |
| ಕಾಲ | : | ಶಾ.ಶ. 1367, ಕ್ರೋಧನ ಸಂವತ್ಸರ, ಕುಂಭ ಮಾಸ, ಶು.7, ಅನುರಾಧಾ ನಕ್ಷತ್ರ, ಗುರುವಾರ = ಕ್ರಿ.ಶ. 1446, ಫೆಬ್ರವರಿ 17 |
| ಭಾಷೆ ಮತ್ತು ಲಿಪಿ | : | ತಮಿಳು |
| ವಿಷಯ | : | ಈ ಶಾಸನವು ತಿರುಮಲೈ ದೇವಸ್ಥಾನದ ಸ್ಥಾನತ್ತಾರರು ಪಂಕಯ್ಯ ಚೆಲ್ಲಿ - ತಿರುನಂದಾವನದ ವ್ಯವಸ್ಥಾಪಕ ಕೋಯಿಲ್ ಕೇಳ್ವಿ ಎಂಪೆರುಮಾನ್ ಜೀಯರರೊಂದಿಗೆ ಮಾಡಿಕೊಂಡ ಒಪ್ಪಂದವನ್ನು ದಾಖಲಿಸಿದೆ. ಅವರು ಶ್ರೀಭಂಡಾರದಲ್ಲಿ ನಳಿಪಣ 1000 (ಪಣ) ಹಣವನ್ನು ಪುಷ್ಪಯಾಗಂ ದಿವಸ ದೇವರಿಗೆ ಸೇವೆ, ನೈವೇದ್ಯಾದಿಗಳನ್ನು ಅರ್ಪಿಸಲು ಠೇವಣಿಯಾಗಿ ಇಟ್ಟರು. ತಿರುವೇಂಕಟಮ್+ ಉಡೈಯಾನ್ ಸ್ವಾಮಿಗೆ ಆಡಿಮಾಸದಿಂದ ಚಿತ್ತಿರೈ ಮಾಸದವರೆಗೆ ಆಚರಿಸಲ್ಪಡುವ ಸಪ್ತ ಉತ್ಸವಗಳಲ್ಲಿ ಹಾಗೂ ಗೋವಿಂದರಾಜಪ್ಪೆರುಮಾಳ್ ದೇವರಿಗೆ ವೈಕಾಶಿ ಮತ್ತು ಆನಿ ಉತ್ಸವಗಳಲ್ಲಿ ಈ ಸೇವಾ ಕೈಂಕರ್ಯವನ್ನು ನೆರವೇರಿಸುವದರೊಂದಿಗೆ ಪ್ರಸಾದವನ್ನು ವಿತರಿಸಬೇಕಿತ್ತು. ವಸ್ತುಗಳನ್ನು ವಿವರವಾಗಿ ಶಾಸನದಲ್ಲಿ ಪಟ್ಟಿಮಾಡಿದೆ. |
| ಆಕರ | : | ತಿ.ತಿ.ದೇ. ಶಾ. ಸಂಪುಟ - I, ನಂ. 220 |

# ನರಸಿಂಹನ ಕಾಲದ ತಿರುಮಲೈ ಶಾಸನಂ

| | | |
|---|---|---|
| ಶಾಸನವಿರುವ ಸ್ಥಳ | : | ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ಉತ್ತರದ ಗೋಡೆ) |
| ರಾಜವಂಶ | : | ವಿಜಯನಗರ (ಸಾಳುವ) ರಾಜ : ನರಸಿಂಹನ ಕಾಲ |
| ಕಾಲ | : | ಶಾ.ಶ. 1395, ವಿಜಯ ಸಂವತ್ಸರ, ಸಿಂಹ ಮಾಸ, ಹಸ್ತಾನಕ್ಷತ್ರ, ಚಾಂದ್ರ ಶು. 12, ಶುಕ್ರವಾರ<br>= ಕ್ರಿ.ಶ. 1473, ಆಗಸ್ಟ ತೇದಿ ದಿವಸ ವಿವರ ತಪ್ಪಿದೆ. |
| ಭಾಷೆ ಮತ್ತುಲಿಪಿ | : | ತಮಿಳು |
| ವಿಷಯ | : | ಈ ಶಾಸನವು ತಿರುಮಲೈ ಸ್ಥಾನತ್ತಾರರು ದೈವಜ್ಞ ಸೋಮಯಾಜಿಗಳ ಪುತ್ರ ಸೋಮನಾಥ ದೀಕ್ಷಿತರೊಂದಿಗೆ ಮಾಡಿಕೊಂಡ ಒಪ್ಪಂದವನ್ನು ದಾಖಲಿಸಿದೆ. ಅವರು ಪುರಡಕುಣ್ಡ್ರು (ಬುರುಡಗುಂಟೆ) ನಿವಾಸಿ. ದೇವಸ್ಥಾನವು ಹೊಂದಿದ ಭಟ್ಟುವೃತ್ತಿ ಭೂಮಿಯಲ್ಲಿ ದೀಕ್ಷಿತರು 215 ಕುಳಿ ಭೂಮಿಯನ್ನು ಕೊಂಡುಕೊಂಡು ಅದನ್ನು ಆ ದೇವಾಲಯಕ್ಕೇನೆ ಪುನಃ ದತ್ತಿಯನ್ನಾಗಿ ನೀಡಿದರು. ಆ ಸಂಬಂಧದಲ್ಲಿ ದೇವಾಲಯಕ್ಕೆ ತೆರಿಗೆಗಳಿಗೆ ಪ್ರತಿಯಾಗಿ ತಿರುವೇಂಕಟಮ್+ಉಡೈಯಾನ್ ದೇವರಿಗೆ ನೈವೇದ್ಯವನ್ನು ನೀಡಲು ಒಪ್ಪಿಗೆಯಾಯಿತು. ನೈವೇದ್ಯದ ವಸ್ತುಗಳನ್ನು ಶ್ರೀ ಭಂಡಾರವು ನೀಡಬೇಕೆಂದು ಮತ್ತು ಪ್ರಸಾದದ ಒಂದು ನಾಟಿ ಭಾಗವನ್ನು ಆತನಿಗೆ ಕೊಟ್ಟು ಉಳಿದುದನ್ನು ಆ ಸಮಯಕ್ಕೆ ಬಂದ ಭಕ್ತರಿಗೆ ಹಂಚಬೇಕೆಂದು ನಿಶ್ಚಯವಾಯಿತು. |
| ಆಕರ | : | ತಿ.ತಿ.ದೇ. ಶಾ. ಸಂಪುಟ – II, ನಂ. 54 |

# ತಿರುಮಲೈಯಲ್ಲಿರುವ ವಿಜಯನಗರ ಶಾಸನ

| | | |
|---|---|---|
| ಶಾಸನವಿರುವ ಸ್ಥಳ | : | ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ಪಶ್ಚಿಮದ ಗೋಡೆ) |
| ರಾಜವಂಶ | : | ವಿಜಯನಗರ (ಸಂಗಮ) ರಾಜ : ಇಮ್ಮಡಿ ಹರಿಹರ |
| ಕಾಲ | : | ಶಾ.ಶ. 1314, ಆಂಗೀರಸ ಸಂವತ್ಸರ, ಪಙ್ಗುಣಿ ಮಾಸ, 2ನೇ ದಿವಸ = ಕ್ರಿ.ಶ. 1393, ಫೆಬ್ರವರಿ 25, ಮಂಗಳವಾರ. |
| ಭಾಷೆ ಮತ್ತು ಲಿಪಿ | : | ತಮಿಳು |
| ವಿಷಯ | : | ಈ ಶಾಸನವು ತಿರುಮಲೈ ದೇವಸ್ಥಾನದ ತಾನತ್ತಾರರು (ಸ್ಥಾನಪತಿ ಸ್ಥಾನಾಧಿಕಾರಿಗಳು) ಮುಲ್ಲೈ ತಿರುವೇಂಕಟ ಜೀಯರ್ ಅವರೊಂದಿಗೆ ಮಾಡಿಕೊಂಡ ಒಪ್ಪಂದವನ್ನು ದಾಖಲಿಸಿದೆ. ಶ್ರೀಯುತರು ತಿರುನಂದಾವನದ ವ್ಯವಸ್ಥಾಪಕರು. ಅವರು ಶ್ರೀಭಂಡಾರದಲ್ಲಿ 600 ಪಣಹಣವನ್ನು ಠೇವಣಿಯಾಗಿಟ್ಟು ಅದರ ಬಡ್ಡಿಯಲ್ಲಿ ಮಲೈಕಿಣಿಯನಿನ್ಱಪ್ಪೆರುಮಾಳ್ ದೇವರು ಮತ್ತು ನಾಚಿ ಅಮ್ಮನವರ ಮೆರುವಣಿಗೆಯ ಉತ್ಸವವು ತಿರುಪ್ಪೂಮಂಡಪಮ್ ಸ್ಥಳಕ್ಕೆ ಬಂದಾಗ್ಗೆ ದೇವರಿಗೆ ಪೂಜೆ, ನೈವೇದ್ಯ ಇತ್ಯಾದಿಗಳನ್ನು ಏರ್ಪಡಿಸಲು ಬಳಸಬೇಕೆಂದು ಅಪೇಕ್ಷಿಸಿದ್ದರು. ಈ ವ್ಯವಸ್ಥೆ ಆ ಚಂದ್ರಾರ್ಕರುಳ್ಳ ಪರ್ಯ್ಯಂತ ನಡೆಯಬೇಕೆಂಬುದು ಅವರ ಆಕಾಂಕ್ಷೆಯಾಗಿತ್ತು. ಪ್ರಸಾದವನ್ನು ಅವರಿಗೂ ಆನಂತರದಲ್ಲಿ ಮಠದ ಪೀಠವನ್ನು ಅಲಂಕರಿಸುವ ಏಕಾಕೀ ಶ್ರೀವೈಷ್ಣವ ವ್ಯಕ್ತಿಗೂ ನೀಡಬೇಕಿತ್ತು. |
| ಆಕರ | : | ತಿ.ತಿ.ದೇ. ಶಾ. ಸಂಪುಟ - I, ನಂ. 190 |

# ನರಸಿಂಹನ ತಿರುಮಲೈ ಶಾಸನಂ

| | | |
|---|---|---|
| ಶಾಸನವಿರುವ ಸ್ಥಳ | : | ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ಪಶ್ಚಿಮದ ಗೋಡೆ) |
| ರಾಜವಂಶ | : | ವಿಜಯನಗರ ರಾಜ : ನರಸಿಂಹ |
| ಕಾಲ | : | ಶಾ. ಶ. 1379, ಈಶ್ವರ ಸಂವತ್ಸರ, ವೃಶ್ಚಿಕ ಮಾಸ, ಪುಷ್ಯಮಿ ನಕ್ಷತ್ರ, ಸೋಮವಾರ<br>= ಕ್ರಿ.ಶ. 1457, ನವಂಬರ್ 7 |
| ಭಾಷೆ | : | ತಮಿಳು |
| ಲಿಪಿ | : | ,, |
| ವಿಷಯ | : | ಈ ಶಾಸನವು 1000 ಪಣವನ್ನು ನರಸಿಂಹದೇವರ ದೇವಾಲಯದ ದಾಸಿ ನೃತ್ಯಪಟು ವೇಂಕಟ ವಲ್ಲಿ ಎಂಬವಳು ಠೇವಣಿಯಾಗಿಟ್ಟುದನ್ನು ದಾಖಲಿಸಿದೆ. ಆಕೆ ಸಾವಿರಿ ಪೆರುಮಾಳ ಪುತ್ರಿ. ಹಣವನ್ನು ತಿರುವೇಂಕಟಮ್+ಉಡೈನ ದೇವರಿಗೆ ತಿರುಪ್ಪೋನಗಂ (ಚಿಲುಪಾಲು) ನೈವೇದ್ಯಕೆಂದು ಆಕೆ ದಾನಮಾಡಿದಳು. ಈ ನೈವೇದ್ಯ ಪ್ರಸಾದವನ್ನು ಸಂಧಿ ಸಮಯಕ್ಕೆ ವಿತರಿಸಲಾಗುತ್ತಿತ್ತು. ಹೀಗೆಂದು ಸ್ಥಾನತ್ತಾರ ಹಾಗೂ ವೇಂಕಟವಳ್ಳಿಯಾರ ಮಧ್ಯೆ ಒಪ್ಪಂದವೇರ್ಪ್ಪಟ್ಟಿತ್ತು. |
| ಆಕರ | : | ತಿ.ತಿ.ದೇ. ಶಾ. ಸಂಪುಟ – II, ನಂ. 5 |

# ನರಸಿಂಹನ ತಿರುಮಲೈ ಶಾಸನಂ

ಶಾಸನವಿರುವ ಸ್ಥಳ : ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ಪಶ್ಚಿಮದ ಗೋಡೆ)

ರಾಜವಂಶ : ವಿಜಯನಗರ (ಸಾಳುವ) ರಾಜ : ನರಸಿಂಹನ ಕಾಲ

ಕಾಲ : ಶಾ.ಶ. 1389, ಸರ್ವಜಿತ್ ಸಂವತ್ಸರ, ಮೂಲಾನಕ್ಷತ್ರ, ಮೀನಮಾಸ (ಚಾಂದ್ರ) ಬ. 7, ಬುಧವಾರ
= ಕ್ರಿ.ಶ. 1467/1468, ಮಾರ್ಚ್ 16

ಭಾಷೆ ಮತ್ತು ಲಿಪಿ : ತಮಿಳು

ವಿಷಯ : ಈ ಶಾಸನವು ತಿರುಮಲೈ ದೇವಾಲಯದ ಸ್ಥಾನತ್ತಾರರು ಸಾಳುವ ಗುಂಡಯ ದೇವಮಹಾರಾಜ ಉಡ್ಡೈಯಾರರ ಪುತ್ರ ಸಾಳುವ ನರಸಿಂಹರಾಜ ಉಡ್ಡೈಯಾರರ ಜೊತೆಗೆ ಮಾಡಿಕೊಂಡ ಒಪ್ಪಂದವನ್ನು ದಾಖಲಿಸಿದೆ. ರಾಜನು ದೇವಾಲಯಕ್ಕೆಂದು ತಣಿಗೈನಾಡಿನಲ್ಲಿರುವ ಆಗರಂ ಮುರುಕ್ಕಮ್‌ಪಟ್ಟು ಎಂಬ ಗ್ರಾಮವನ್ನು ಮತ್ತು ಕೆರೆಗಾಗಿ 2000 ಪಣವನ್ನು ಧಾರಾಪೂರ್ವಕವಾಗಿ ದತ್ತಿಯನ್ನಿತ್ತನು. ಗ್ರಾಮದ ಹಾಗೂ ಕೆರೆಯ ಆದಾಯಗಳನ್ನು ತಿರುವೇಂಕಟಮ್+ಉಡ್ಡೈಯಾನ್ ದೇವರ ನೈವೇದ್ಯಕ್ಕೆ ಬಳಸಬೇಕಾಗಿತ್ತು. ನೈವೇದ್ಯದ ವಸ್ತುಗಳನ್ನು ಶ್ರೀ ಭಂಡಾರವು ಪ್ರತಿನಿತ್ಯ ಒದಗಿಸಬೇಕಾಗಿತ್ತು. ನೈವೇದ್ಯದ ವಸ್ತುಗಳ ವಿವರಣೆಯೂ ಇದೆ.

ಆಕರ : ತಿ.ತಿ.ದೇ. ಶಾ. ಸಂಪುಟ – II, ನಂ. 31

# ಸಾಳುವ ನರಸಿಂಹನ ಕಾಲದ ತಿರುಮಲೈ ಶಾಸನ

| | | |
|---|---|---|
| ಶಾಸನವಿರುವ ಸ್ಥಳ | : | ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ಪಶ್ಚಿಮ ಗೋಡೆ ಕುಮುದ ಪಟ್ಟಿ) |
| ರಾಜವಂಶ | : | ವಿಜಯನಗರ (ಸಾಳುವ)  ರಾಜ : ಸಾಳುವ ನರಸಿಂಹ |
| ಕಾಲ | : | ಶಾ.ಶ. 1396<br>= ಕ್ರಿ.ಶ. 1474 |
| ಭಾಷೆ ಮತ್ತು ಲಿಪಿ | : | ತಮಿಳು |
| ವಿಷಯ | : | ಈ ಶಾಸನವು ತಾನತ್ತಾರರು (ಸ್ಥಾನಾಧಿಕಾರಿಗಳು) ಮತ್ತು ಪೆರಿಯಪ್ಪೆರುಮಾಳ್ ದಾಸನ್ ಅವರ ಮಧ್ಯೆ ಜರುಗಿದ ಒಪ್ಪಂದವನ್ನು ದಾಖಲಿಸಿದೆ. ಪೆರುಮಾಳ್‌ದಾಸನ್ ಪಿನ್‌ಸೆನ್ನವಲ್ಲಿಯಲ್ಲಿರುವ ನಂದಾವನಮ್ ತೋಟದ ವ್ಯವಸ್ಥಾಪಕರು. ಅವರು 1660 ಪಣಮ್ ಹಣವನ್ನು ದೇವಾಲಯದ ಭಂಡಾರದಲ್ಲಿ ಠೇವಣಿಯಾಗಿ ಇಟ್ಟರು. ಇದಕ್ಕೆ ಪ್ರತಿಯಾಗಿ ಧ್ವಜಾರೋಹಣ ಉತ್ಸವದಲ್ಲಿ ತಿರುವೇಂಕಟವನ್ ಉಡೈಯಾನ್ ದೇವರಿಗೂ ಮತ್ತು ಗೋವಿಂದರಾಜಪ್ಪೆರುಮಾಳ್ ದೇವರಿಗೂ ಆ ಸಪ್ತಾಹಪೂರ್ಣ ತಿರುಪ್ಪೊನಗಂ ನೈವೇದ್ಯವನ್ನು ಅರ್ಪಿಸಬೇಕಿತ್ತು. ದಾನದತ್ತಿ ಹಣವನ್ನು ದೇವಾಲಯದ ಕೆರೆ ಹಾಗೂ ಕಾಲುವೆಗಳ ದುರಸ್ತಿಗೆ ಬಳಸುವ ಮತ್ತು ಬಂದ ಫಸಲಿನ ಆದಾಯದಿಂದ ಪೂಜಾಕೈಂಕರ್ಯಗಳನ್ನೂ ನೈವೇದ್ಯದ ವಸ್ತುಗಳ ಖರೀದಿಯನ್ನೂ ಮಾಡಬೇಕೆಂದು ಬರೆದಿದೆ. ಖರೀದಿಸುವ ವಸ್ತುಗಳ ವಿವರವೂ ಉದಾ: ತುಪ್ಪ, ಅಕ್ಕಿ, ಉಪ್ಪು, ಕಾಳ ಮೆಣಸು ಇತ್ಯಾದಿತ್ಯಾದಿಗಳ ವಿವರ ಇದೆ. ನಿವೇದಿತ ಪ್ರಸಾದವನ್ನು ದಾನಿಗೂ ಅಯ್ಯಂಗಾರರ ರಾಮಾನುಜಕೂಟಕ್ಕೂ ಮತ್ತು 'ಸುಕಿಯನ್' ಪ್ರಸಾದವನ್ನು ಏಕಾಕಿ ಶ್ರೀವೈಷ್ಣವರಿಗೂ ವಿತರಿಸಬೇಕೆಂದು ಬರೆದಿದೆ. |
| ಆಕರ | : | ತಿ.ತಿ.ದೇ. ಶಾ. ಸಂಪುಟ – II, ನಂ. 69 |

# ನರಸಿಂಹನ ಕಾಲದ ತಿರುಮಲೈ ಶಾಸನಂ

| | | |
|---|---|---|
| ಶಾಸನವಿರುವ ಸ್ಥಳ | : | ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ದಕ್ಷಿಣದ ಗೋಡೆ ಪಡಿಕಾವಲಿ ಗೋಪುರಂ) |
| ರಾಜವಂಶ | : | ವಿಜಯನಗರ (ಸಾಳುವ) ರಾಜ : ನರಸಿಂಹನ ಕಾಲ |
| ಕಾಲ | : | ಶಾ.ಶ. 1398, ದುರ್ಮುಖಿ ಸಂವತ್ಸರ, ಮೇಷ ಮಾಸ, ಅಶ್ವಿನಿ ನಕ್ಷತ್ರ, ಚಾಂದ್ರ ಶು. 1, ಮಂಗಳವಾರ<br>= ಕ್ರಿ.ಶ. 1476, ಮಾರ್ಚ್ 26 |
| ಭಾಷೆ ಮತ್ತು ಲಿಪಿ | : | ತಮಿಳು |
| ವಿಷಯ | : | ಈ ಶಾಸನವು ತಿರುಮಲೈ ಸ್ಥಾನತ್ತಾರರು ಏಕಾಕಿ ಶ್ರೀವೈಷ್ಣವ ಗೋಪಯ್ಯನ್ ಎಂಬ ವ್ಯಕ್ತಿಯೊಂದಿಗೆ ಮಾಡಿಕೊಂಡ ಒಪ್ಪಂದವನ್ನು ದಾಖಲಿಸಿದೆ. ಆತನು ದೇವಸ್ಥಾನದ ಹೂದೋಟ 'ಮುಲೈಕಿನಿಯಾನ್ನಾನ್' ಎಂಬುದರ ಮೇಲ್ವಿಚಾರಕ, ತಿರುವೇಂಗಡಮ್ + ಉಡೈಯಾನ ದೇವರಿಗೆ ತನ್ನ ಹೆಸರಿನಲ್ಲಿ 'ತಿರುಪ್ಪೋನಕಂ' ನೈವೇದ್ಯವನ್ನು ಅರ್ಪಿಸಲು 1000 ನಱಪಣಂ ಹಣವನ್ನು ದೇವಾಲಯದ ಶ್ರೀ ಭಂಡಾರದಲ್ಲಿ ಠೇವಣಿಯಾಗಿಟ್ಟನು. ಆ ಹಣವನ್ನು ಅಲ್ಲಿನ ಕೆರೆಯನ್ನು ಸುಸ್ಥಿಯಲ್ಲಿಡಲು ಬಳಸಲಾಯಿತು. ಬಂದ ಬೆಳೆಯಲ್ಲಿ ಶ್ರೀ ಭಂಡಾರವು ನೈವೇದ್ಯದ ವ್ಯವಸ್ಥೆಯನ್ನು ಮಾಡಬೇಕಿತ್ತು. ಪ್ರಸಾದದಲ್ಲಿ ಒಂದು ನಾಟಿಭಾಗವನ್ನು ಯಜಮಾನನಿಗೆ ಕೊಟ್ಟು ಮಿಕ್ಕುದನ್ನು ತತ್ಕಾಲಕ್ಕೆ ಬಂದ ಭಕ್ತರಿಗೆ ವಿತರಿಸಬೇಕಿತ್ತು. |
| ಆಕರ | : | ತಿ.ತಿ.ದೇ. ಶಾ. ಸಂಪುಟ – II, ನಂ. 66 |

# ನರಸಿಂಹನ ಕಾಲದ ತಿರುಮಲೈ ಶಾಸನಂ

| | | |
|---|---|---|
| ಶಾಸನವಿರುವ ಸ್ಥಳ | : | ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ಪಶ್ಚಿಮದ ಗೋಡೆ) |
| ರಾಜವಂಶ | : | ವಿಜಯನಗರ (ಸಾಳುವ) ರಾಜ : ನರಸಿಂಹನ ಕಾಲ |
| ಕಾಲ | : | ಶಾ.ಶ. 1391, ವಿರೋಧಿ ಸಂವತ್ಸರ, ಸಿಂಹಮಾಸ, ಅವಿಟ್ಟಮ್ ನಕ್ಷತ್ರ (ಧನಿಷ್ಠಾ), ಚಾಂದ್ರ ಶು. 14, ಸೋಮವಾರ<br>= ಕ್ರಿ.ಶ. 1469, ಆಗಸ್ಟು 21 |
| ಭಾಷೆ ಮತ್ತು ಲಿಪಿ | : | ತಮಿಳು |
| ವಿಷಯ | : | ಈ ಶಾಸನವು ಸ್ಥಾನತ್ತಾರರು ಲಕ್ಕಸಾನಿ (ಲಕ್ಕಚ್ಛಾನಿ) ಅಮ್ಮನ್ ಅವರ ಪುತ್ರ ಆದಿರಾಜನೊಂದಿಗೆ ಮಾಡಿಕೊಂಡ ಒಪ್ಪಂದವನ್ನು ದಾಖಲಿಸಿದೆ. ಆದಿರಾಜನು ದೇವಸ್ಥಾನಕ್ಕೆ 1000 ಪಣಂ ಹಣವನ್ನು ದಾನವನ್ನಾಗಿ ನೀಡಿದನು. ಆ ಹಣವನ್ನು ಕೆರೆಯನ್ನು ಕಲಿಧೀರ ಮಂಗಲಂ ಗ್ರಾಮದಲ್ಲಿ ಕಟ್ಟಲು ನೀಡಲಾಯಿತು. ಆ ಕೆರೆಯಿಂದ ಬಂದ ಆದಾಯವನ್ನು ಆತನ ಹೆಸರಿನಲ್ಲಿ ತಿರುವೇಂಕಟಮ್ + ಉಡೈಯಾನ್ ದೇವರಿಗೆ 'ತಿರುಪ್ಪೋನಕಂ' ನೈವೇದ್ಯವನ್ನು ಅರ್ಪಿಸಲು ಬಳಸಬೇಕಿತ್ತು. ನೈವೇದ್ಯದ ವಸ್ತುಗಳನ್ನು ಪ್ರತಿನಿತ್ಯ ಶ್ರೀಭಂಡಾರವು ನೀಡಬೇಕಿತ್ತು. ವಸ್ತುಗಳ ವಿವರವೂ ಇದೆ. |
| ಆಕರ | : | ತಿ.ತಿ.ದೇ. ಶಾ. ಸಂಪುಟ – II, ನಂ. 43 |

# ಸಾಳುವ ನರಸಿಂಹನ ತಿರುಮಲೈ ಶಾಸನಂ

ಶಾಸನವಿರುವ ಸ್ಥಳ : ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ಪಶ್ಚಿಮದ ಗೋಡೆ)

ರಾಜವಂಶ : ವಿಜಯನಗರ (ಸಾಳುವ) ರಾಜ : ಸಾಳುವ ನರಸಿಂಹ

ಕಾಲ : ಶಾ.ಶ. 1387
= ಕ್ರಿ.ಶ. 1465

ಭಾಷೆ ಮತ್ತು ಲಿಪಿ : ತಮಿಳು

ವಿಷಯ : ಈ ಶಾಸನವು ತಾನತ್ತಾರರು (ಸ್ಥಾನಾಧಿಕಾರಿಗಳು) ಮತ್ತು ರಾಜಕುಮಾರ ಪರ್ವತರಾಜನ ಮಧ್ಯೆ ಜರುಗಿದ ಒಪ್ಪಂದವನ್ನು ದಾಖಲಿಸಿದೆ. ಆತ ಪಾಡಿಯಲ್ಲಿರುವ ಭೂಮಿಗೆ ನೀರು ಬರುವಂತೆ ಕಾಲುವೆಯೊಂದನ್ನು ತೋಡಿಸಿದನು. ಆದಕ್ಕೆ ಪ್ರತಿಯಾಗಿ ದೇವಾಲಯದ ಆಡಳಿತವು ದೇವರಿಗೆ ನಾಲ್ಕು ತಿರುಪ್ಪೋನಕಂ ನೈವೇದ್ಯಗಳನ್ನು ದಾನಿಯ ಹೆಸರಿನಲ್ಲಿ ದೇವರಿಗೆ ಅರ್ಪಿಸಬೇಕಿತ್ತು. ಆ ನೈವೇದ್ಯದಲ್ಲಿ ಎರಡು ನಾಳಿ (ಭಾಗ) ಪ್ರಸಾದವನ್ನು ದಾನಿಗೆ ಕೊಡಬೇಕಿತ್ತು. ಮತ್ತೆ ಆ ಪ್ರಸಾದದಲ್ಲಿ ಒಂದಷ್ಟನ್ನು ಕೆಂಪು ಕಮಲಗಳನ್ನು ಬೆಳೆಯುವ ಶ್ರೀವೈಷ್ಣವ ಭಕ್ತರಿಗೆ ವಿತರಿಸಬೇಕಿತ್ತು. ಯಾರು ಕಂದಾಡೈ ರಾಮಾನುಜ ಅಯ್ಯಂಗಾರರ ಕೂಟದಲ್ಲಿ ವಾಸವಾಗಿದ್ದರು.

ಆಕರ : ತಿ.ತಿ.ದೇ. ಶಾ. ಸಂಪುಟ – II, ನಂ. 23

# ಹೋಬಳರಾಜನ ತಿರುಮಲೈ ಶಾಸನಂ

| | | |
|---|---|---|
| ಶಾಸನವಿರುವ ಸ್ಥಳ | : | ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ಉತ್ತರದ ಗೋಡೆ) |
| ರಾಜವಂಶ | : | ಯಾದವರಾಯರು, ರಾಜ : ಹೋಬಳರಾಜ(ಅಹೋಬಲರಾಜ=ನರಸಿಂಹ) |
| ಕಾಲ | : | ಆಳ್ವಿಕೆಯ 40 ನೇ ವರ್ಷ |
| ಭಾಷೆ ಮತ್ತು | : | ಸಂಸ್ಕೃತ |
| ಲಿಪಿ | : | ಗ್ರಂಥ (ತಮಿಳು) |
| ವಿಷಯ | : | ಶ್ರೇಷ್ಠ ಗುಣಗಳಿಂದ ಕೂಡಿದ ಶ್ರೀ ಹೋಬಳರಾಜನು ದೇವಾಲಯಕ್ಕೆ ಆಭರಣವೊಂದನ್ನು ಅರ್ಪಿಸಿದನು. ಅದು ಶೌರಿಯ (ವಿಷ್ಣುವಿನ) ಹಸ್ತದಲ್ಲಿ ಹಸ್ತಾಲಂಕಾರವಾಗಿ ಅಲಂಕರಿಸಲಾಯಿತು. ಅದನ್ನು ಕಂಡು ಜನರು ಸಂತೋಷಪಟ್ಟರು. |
| ಆಕರ | : | ತಿ.ತಿ.ದೇ. ಶಾ. ಸಂಪುಟ – I, ನಂ. 116 |

# ತಂಜೈ ಓಬಲನಾಥ ದೊರೆಯ ತಿರುಮಲೈ ಶಾಸನಂ

| | | |
|---|---|---|
| ಶಾಸನವಿರುವ ಸ್ಥಳ | : | ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ದಕ್ಷಿಣದ ಗೋಡೆ) |
| ರಾಜವಂಶ | : | ಯಾದವರಾಯರು ರಾಜ : ತಂಜೈ ಓಬಲನಾಥ |
| ಕಾಲ | : | ಆಳ್ವಿಕೆಯ 40 ನೇ ವರ್ಷ, |
| ಭಾಷೆ ಮತ್ತು ಲಿಪಿ | : | ತಮಿಳು |
| ವಿಷಯ | : | ಇದೊಂದು ಪದ್ಯ ಶಾಸನ. ಇದು ತಂಜೈ ದೊರೆ ಓಬಳನಾಥನು, ವಿದ್ವತ್ತಿಗೆ ಹೆಸರಾದವನು, ವೇಂಕಟಗಿರಿಯ ಒಡೆಯನಿಗೆ (ಶ್ರೀ ವೇಂಕಟನಾಥನಿಗೆ) ಹೂದೋಟವೊಂದನ್ನು ದತ್ತಿಯನ್ನಾಗಿ ನೀಡಿದನು. ಉತ್ತರದ ಆ ಬೆಟ್ಟ ಬಹು ರಮಣೀಯವಾದ ತೋಟಗಳನ್ನು ಹೊಂದಿದೆ. |
| ಆಕರ | : | ತಿ.ತಿ.ದೇ. ಶಾ. ಸಂಪುಟ – I, ನಂ. 117 |

# ತಿರುಮಲೈಯಲ್ಲಿರುವ ವಿಜಯನಗರ ಕಾಲದ ಶಾಸನ

| | | |
|---|---|---|
| ಶಾಸನವಿರುವ ಸ್ಥಳ | : | ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ದಕ್ಷಿಣದ ಗೋಡೆ) |
| ರಾಜವಂಶ | : | ವಿಜಯನಗರ (ಸಂಗಮ) ರಾಜ : ಬುಕ್ಕರಾಯನ ಕಾಲ |
| ಕಾಲ | : | ಶಾ.ಶ. 1376, ಭಾವನಾಮ ಸಂವತ್ಸರ, ಕರ್ಕಾಟಕ ಮಾಸ, ಶು.12, ಮೂಲಾನಕ್ಷತ್ರ, ಆದಿತ್ಯವಾರ = ಕ್ರಿ.ಶ. 1454, ಜುಲೈ 7 |
| ಭಾಷೆ ಮತ್ತು ಲಿಪಿ | : | ತಮಿಳು |
| ವಿಷಯ | : | ಈ ಶಾಸನವು ತಾನತ್ತಾರರು (ಸ್ಥಾನಾಧಿಕಾರಿಗಳು) ದೇವಸ್ಥಾನದ ಪಾಪನಾಶಂ ತೋಟದ ವ್ಯವಸ್ಥಾಪಕ ಶ್ರೀ ರಾಮದಾಸರೊಂದಿಗೆ ಮಾಡಿಕೊಂಡ ಒಪ್ಪಂದವನ್ನು ದಾಖಲಿಸಿದೆ. ರಾಮದಾಸರು ಶ್ರೀ ಭಂಡಾರದಲ್ಲಿ 1000 ಪಣಂ ಹಣವನ್ನು ಠೇವಣಿಯಾಗಿಟ್ಟು ಅದರ ಬಡ್ಡಿಯಲ್ಲಿ ಶ್ರೀವೇಂಕಟಮ್+ ಉಡೈಯಾನ್ ದೇವರಿಗೆ ನಿತ್ಯ ಬುಕ್ಕರಾಯನ ಸಂಧಿ ಸಮಯದಲ್ಲಿ 'ತಿರುಪೋನಕಂ' ನೈವೇದ್ಯವನ್ನು ಅರ್ಪಿಸಲು ವಿನಂತಿಸಿಕೊಂಡರು. ದಾನಿಗೆ ಸಲ್ಲಬೇಕಾದ 1 ನಾಟಿ ಪ್ರಸಾದವನ್ನು ಆ ಹೂದೋಟವನ್ನು ನೋಡಿಕೊಳ್ಳುವ ಮತ್ತು ಅಲ್ಲಿನ ವ್ಯವಸಾಯ ಕಾರ್ಯವನ್ನು ಗೈಯುವ ಶ್ರೀವೈಷ್ಣವ ಜನರು ಪಡೆಯುವ ಹಕ್ಕನ್ನು ಹೊಂದಿದ್ದರು. |
| ಆಕರ | : | ತಿ.ತಿ.ದೇ. ಶಾ. ಸಂಪುಟ – I, ನಂ. 225 |

# ನರಸಿಂಹನ ಕಾಲದ ತಿರುಮಲೈ ಶಾಸನಂ

| | | |
|---|---|---|
| ಶಾಸನವಿರುವ ಸ್ಥಳ | : | ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ದಕ್ಷಿಣದ ಗೋಡೆ) |
| ರಾಜವಂಶ | : | ವಿಜಯನಗರ (ಸಾಳುವ) ರಾಜ : ನರಸಿಂಹ |
| ಕಾಲ | : | ಶಾ.ಶ. 1384, ಚಿತ್ರಭಾನು ಸಂವತ್ಸರ, ಚಿತ್ತಿರೈ ಮಾಸ, 25ನೇ ದಿವಸ, = ಕ್ರಿ.ಶ. 1462, ಏಪ್ರಿಲ್ 20, ಮಂಗಳವಾರ |
| ಭಾಷೆ ಮತ್ತು ಲಿಪಿ | : | ತಮಿಳು |
| ವಿಷಯ | : | ಇದೊಂದು ಧರ್ಮಶಾಸನ. ಕೋನೇರಿ ಮತ್ತು ಉಲಗಳಂದವೇಳ್ಳಾನ ಎಂಬ ಇಬ್ಬರು, ಪೆರಿಗೋಪಾಲನ್, ಚಿನ್ನನ್, ಕಾರಿ, ಸಿಱುಗೋಪಾಲನ್ ಮತ್ತು ಸಾತ್ತಕುಡಿಮರುದೂರು ಊರಿನ ಇತರ ಜನರಿಗೆ ತಿರುವೇಂಕಟಮ್+ ಉಡೈಯಾನ್ ದೇವರ ದೇವಾಲಯದಲ್ಲಿ ದೀಪದ ಸೇವೆಯನ್ನು ನರಸಿಂಹರಾಜ ಉಡೈಯಾರ್ ಅವರಿಗೆ ಪುಣ್ಯ ಉಂಟಾಗಲಿ ಎಂದು ನಡೆಸಬೇಕೆಂದು ನಿರ್ದೇಶಿಸುತ್ತಾರೆ. ಸೇವೆಗೈಯಲು ಒಪ್ಪಿದ ಅವರು ಪ್ರತಿವರ್ಷ ದೇವಾಲಯಕ್ಕೆ ತುಪ್ಪವನ್ನು ಒಪ್ಪಿಸಿ ದೇವಾಲಯದಿಂದ ಆ ಸಂಬಂಧದಲ್ಲಿರಸೀದಿಯನ್ನು ಜೀಯರರ ಹಸ್ತಾಕ್ಷರದಲ್ಲಿ ಪಡೆಯಬೇಕಿತ್ತು. |
| ಆಕರ | : | ತಿ.ತಿ.ದೇ. ಶಾ. ಸಂಪುಟ – II, ನಂ. 12 |

# ತಿರುಮಲೈಯಲ್ಲಿರುವ ವಿಜಯನಗರ ಶಾಸನ

| | | |
|---|---|---|
| ಶಾಸನವಿರುವ ಸ್ಥಳ | : | ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ದಕ್ಷಿಣದ ಗೋಡೆ) |
| ರಾಜವಂಶ | : | ವಿಜಯನಗರ (ಸಂಗಮ)    ರಾಜ : |
| ಕಾಲ | : | ಶಾ.ಶ. 1312, ಪ್ರಮೋದೂತ ಸಂವತ್ಸರ, ಮಾರ್ಗಳಿಮಾಸದ 11ನೇ ದಿವಸ = ಕ್ರಿ.ಶ. 1390, ಡಿಸೆಂಬರ್ 8, ಗುರುವಾರ. |
| ಭಾಷೆ ಮತ್ತು ಲಿಪಿ | : | ತಮಿಳು |
| ವಿಷಯ | : | ಈ ಶಾಸನವು ತಿರುಮಲೈ ದೇವಾಲಯದ ತಾನತ್ತಾರ (ಸ್ಥಾನಪತಿಗಳು) ಮತ್ತು ಅರಸರ ಅಧಿಕಾರಿ ತಿರುನಂದಾವನದ (ಶ್ರೀನಂದನವನದ) ವ್ಯವಸ್ಥಾಪಕ ಮುಲ್ಲೈ ತಿರುವೇಂಕಟಜೀಯರ್ ಎಂಬುವರೊಂದಿಗೆ ಮಾಡಿಕೊಂಡ ಒಪ್ಪಂದವನ್ನು ದಾಖಲಿಸಿದೆ. ಇದರ ಪ್ರಕಾರ ತಿರುವೇಂಕಟಜೀಯರರು 1200 ಪಣಹಣವನ್ನು ಶ್ರೀ ಭಂಡಾರದಲ್ಲಿ ಠೇವಣಿಯನ್ನಿಟ್ಟರು. ಈ ಠೇವಣಿಯ ಮೇಲೆ ಬಂದ ಬಡ್ಡಿಹಣವನ್ನು ತಿರುಮಲದ ಮಲೈಕಿಣಿಯನಿನ್ಱಪ್ಪೆರುಮಾಳ್ ಹಾಗೂ ನಾಚಿಯಮ್ಮರ್ ಅವರ ಮತ್ತು ಗೋವಿಂದಪ್ಪೆರುಮಾಳ್ ದೇವರ ದೇವಾಲಯಗಳಲ್ಲಿ ಮಾರ್ಗಳಿಮಾಸದಲ್ಲಿ ಆಚರಿಸುವ 'ತಿರುಪ್ಪಾವೈ' ಪಠಣದ ಉತ್ಸವದಲ್ಲಿ ಪ್ರಸಾದವಿನಿಯೋಗಕ್ಕೆಂದು ಬಳಸಬೇಕಿತ್ತು. |
| ಆಕರ | : | ತಿ.ತಿ.ದೇ. ಶಾ. ಸಂಪುಟ - I, ನಂ. 187 |

# ಅಚ್ಯುತರಾಯನ ಕಾಲದ ತಿರುಮಲೈ ಶಾಸನ

ಶಾಸನವಿರುವ ಸ್ಥಳ : ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ದಕ್ಷಿಣದ ಗೋಡೆ)

ರಾಜವಂಶ : ವಿಜಯನಗರ ರಾಜ : ಅಚ್ಯುತರಾಯನ ಕಾಲ

ಕಾಲ : ಶಾ.ಶ. 1455, ವಿಜಯ ಸಂವತ್ಸರ; ಸಿಂಹ ಮಾಸ, ಶು. 8, ರೋಹಿಣಿ ನಕ್ಷತ್ರ, ಬುಧವಾರ

=ಕ್ರಿ.ಶ. 1533, ಆಗಸ್ಟ 13

ಭಾಷೆ ಮತ್ತು ಲಿಪಿ : ತಮಿಳು

ವಿಷಯ : ಈ ಶಾಸನವು, ಮಹಾರಾಜಾಧಿರಾಜ, ರಾಜಪರಮೇಶ್ವರ ಶ್ರೀ ವೀರಪ್ರತಾಪ ವೀರ ಅಚ್ಯುತರಾಯರ ಅಧಿಕಾರಿ ರಾಯಸದ ರಾಮಚಂದ್ರ ದೀಕ್ಷಿತರ್ ಮತ್ತು ದೇವಸ್ಥಾನದ ವಿಶ್ವಸ್ಥ ಮಂಡಲಿ ಸದಸ್ಯರ ಮಧ್ಯೆ ಜರುಗಿದ ಒಪ್ಪಂದವನ್ನು ದಾಖಲಿಸಿದೆ. ರಾಮಚಂದ್ರ ದೀಕ್ಷಿತರು ಕಾಶ್ಯಪ ಗೋತ್ರದ ನಾಗರಭಟ್ಟರ ಪುತ್ರರು ಮತ್ತು ಆಗರಂ ಕಡಲಾಡಿ ಅಪರನಾಮಧೇಯ ವೇಂಕಟಾದ್ರಿ ಸಮುದ್ರಮ್ ಗ್ರಾಮದ ನಿವಾಸಿ. ಅವರು ದೇವಾಲಯದ ಶ್ರೀ ಭಂಡಾರದಲ್ಲಿ 5000 ನರಪ್ಪಣಂ (ಅನನ್‌ಪಣಮ್) ಹಣವನ್ನು ಠೇವಣಿಯಾಗಿ ಇಟ್ಟರು. ಆ ಹಣವನ್ನು ದೇವಾಲಯದ ಕೆರೆ ಕಾಲುವೆಗಳ ದುರಸ್ತಿಗೆ ಬಳಸಲಾಯಿತು ಮತ್ತು ಅದಕ್ಕೆ ಪ್ರತಿಯಾಗಿ ತಿರುವೇಂಕಟಮ್ ಉಡೈಯಾನದೇವರಿಗೂ ಮತ್ತು ಆ ದೇವರ ಮೆರವಣಿಗೆಯ ಉತ್ಸವ ಮೂರ್ತಿ ಮಲೈಕುನಿಯ ನಿನ್ಷಪ್ಪೆರುಮಾಳದೇವರಿಗೆ ನೈವೇದ್ಯ ತಿರುಪ್ಪೋನಕಂ ತಟ್ಟೆಗಳನ್ನು ಪಾತ್ರೆಗಳನ್ನು ಅರ್ಪಿಸಬೇಕಿತ್ತು; ವಿವರಗಳನ್ನು ನೀಡಿದೆ. ಪ್ರಸಾದದ $\frac{1}{4}$ ಭಾಗವನ್ನು ದಾನಿಗೆ ಪಡೆಯಲು ಹಕ್ಕಿದೆ.

ಆಕರ : ತಿ.ತಿ.ದೇ. ಶಾ. ಸಂಪುಟ – IV, ನಂ. 24

# ಶ್ರೀಕೃಷ್ಣದೇವರಾಯನ ತಿರುಮಲೈ ಶಾಸನಂ

| | | |
|---|---|---|
| ಶಾಸನವಿರುವ ಸ್ಥಳ | : | ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ದಕ್ಷಿಣ ಗೋಡೆ; ದೇವಾಲಯದ ಮೊದಲ ಪ್ರಾಕಾರ) |
| ರಾಜವಂಶ | : | ವಿಜಯನಗರ (ತುಳುವ) ರಾಜ : ಕೃಷ್ಣದೇವರಾಯ |
| ಕಾಲ | : | ಶಾ. ಶ. 1434, ಆಂಗೀರಸ ಸಂವತ್ಸರ, ಶ್ರಾವಣ ಬಹುಳ 11<br>= ಕ್ರಿ.ಶ. 1512, ಆಗಸ್ಟ್ 7, ಶನಿವಾರ |
| ಭಾಷೆ ಮತ್ತು ಲಿಪಿ | : | ಕನ್ನಡ |
| ವಿಷಯ | : | ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಪ್ರತಾಪ ಕೃಷ್ಣರಾಯ ಮಹಾರಾಯರ ಬಾಗಿಲು ಕಾಯುವ ಬಾಗಿಲವಸರದ ಸೇವಕ ನರಸಯ್ಯ ಹಾಗೂ ಆತನ ತಮ್ಮ ಆವಸರದ ತಿಮ್ಮಯ್ಯ ತಿರುವೇಂಗಳನಾಥ ದೇವರ ಸನ್ನಿಧಿಯಲ್ಲಿ ಸದಾ ಕಾಲದಲ್ಲಿ ಅರ್ಪಿಸುವ ನಮಸ್ಕಾರ ಮತ್ತೆ ಅವರ ತಾಯಿ ಬಸವಮ್ಮ ಕೂಡ ಅರ್ಪಿಸುವ ನಮಸ್ಕಾರ. |
| ಆಕರ | : | ತಿ.ತಿ.ದೇ. ಶಾ. ಸಂಪುಟ – III , ನಂ. 26 |

# ವಿಜಯನಗರ ಕಾಲದ ತಿರುಮಲೈ ಶಾಸನಂ

ಶಾಸನವಿರುವ ಸ್ಥಳ : ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ದಕ್ಷಿಣದ ಗೋಡೆ)

ರಾಜವಂಶ : ........... ರಾಜ :

ಕಾಲ : ಶಾ. ಶ. 1301 ಸಿದಾರ್ಥಿ ಸಂವತ್ಸರ; ಮಕರಮಾಸ; ಶು. 5, ರೇವತೀ ನಕ್ಷತ್ರ, ಶುಕ್ರವಾರ = ಕ್ರಿ.ಶ. 1380, ಜನವರಿ 13.

ಭಾಷೆ ಮತ್ತು ಲಿಪಿ : ತಮಿಳು

ವಿಷಯ : ಈ ಶಾಸನವು ಅಟಿಗಪ್ಪಿರಾನಾರ್ ತಿರುಕ್ಕಲಿಕೊನ್ಟಿದಾಸರ್ ಎಂಬ ಶ್ರೀವೈಷ್ಣವ ಭಕ್ತರೊಬ್ಬರು ಶ್ರೀವಾರಿಯವರ ಭಂಡಾರದಲ್ಲಿ 400 ಪಣ ಹಣವನ್ನು 50 ಪಣ ಬಡ್ಡಿಯು ಬರುವಂತೆ ಒಟ್ಟು 450 ಪಣ ಹಣವನ್ನು ಠೇವಣಿ ಇಟ್ಟು ಆ ಬಡ್ಡಿಯಲ್ಲಿ ಅವರ ತೋಟದ ದಾರಿಯಲ್ಲಿ ಮಲೈಕಿಣಿಯ ಪೇರುಮಾಳ್ ಹಾಗೂ ನಾಚ್ಚಿಯಮ್ಮಾರ್ ಮೆರವಣಿಗೆಯು ಉತ್ಸವಗಳಲ್ಲಿ ಅಟಿಗಪ್ಪಿರಾನಾರ್ ತಿರುಮಂಡಪಮ್‌ಗೆ (ಶ್ರೀಮಂಟಪಕ್ಕೆ) ಆಗಮಿಸಿದಾಗ ದೇವರಿಗೆ ನೈವೇದ್ಯವನ್ನು ಅರ್ಪಿಸಲು ದೇವಾಲಯುದ ಅಧಿಕಾರಿಗಳೊಂದಿಗೆ ಒಪ್ಪಂದವನ್ನು ಮಾಡಿಕೊಂಡಿರುವುದನ್ನು ದಾಖಲಿಸಿದೆ.

ಆಕರ : ತಿ.ತಿ.ದೇ. ಶಾ. ಸಂಪುಟ – I, ನಂ. 184

# ವಿಜಯನಗರ ಕಾಲದ ತಿರುಮಲೈ ಶಾಸನ

ಶಾಸನವಿರುವ ಸ್ಥಳ : ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ದಕ್ಷಿಣದ ಗೋಡೆ)

ರಾಜವಂಶ : ವಿಜಯನಗರ ರಾಜ :

ಕಾಲ : ಶಾ. ಶ. 1366
= ಕ್ರಿ.ಶ. 1444

ಭಾಷೆ ಮತ್ತು ಲಿಪಿ : ತಮಿಳು

ವಿಷಯ : ಸಿದಕೂಟದ ಭಂಡಾರದಲ್ಲಿಯ ಹಣವನ್ನು ನೋಡಿ ಭಕ್ತರು ತಾವೇ ತಮ್ಮ ಭಾಗವನ್ನು ತೆಗೆದುಕೊಂಡು ನಿತ್ಯವೂ ಪಾರಾಯಣವನ್ನು ಇಬ್ಬರು (ಸೇವೆಯನ್ನು ) ಮಾಡಬೇಕಿತ್ತು.

ಆಕರ : ತಿ.ತಿ.ದೇ. ಶಾ. ಸಂಪುಟ – I, ನಂ. 197

# ಸಾಳುವ ನರಸಿಂಹನ ತಿರುಮಲೈ ಶಾಸನ

**ಶಾಸನವಿರುವ ಸ್ಥಳ :** ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ದಕ್ಷಿಣದ ಗೋಡೆ)

**ರಾಜವಂಶ :** ವಿಜಯನಗರ (ಸಾಳುವ) ರಾಜ : ಸಾಳುವ ನರಸಿಂಹ

**ಭಾಷೆ ಮತ್ತು ಲಿಪಿ :** ತಮಿಳು

**ವಿಷಯ :** ಈ ಶಾಸನವು ತಾನತ್ತಾರರು (ಸ್ಥಾನಾಧಿಕಾರಿಗಳು) ಮತ್ತು ಏಕಾಕಿ ಶ್ರೀವೈಷ್ಣವ ಗೋಪಾಲಯ್ಯನ್ ಇವರ ಮಧ್ಯೆ ಆದ ಒಪ್ಪಂದವನ್ನು ದಾಖಲಿಸಿದೆ. ಗೋಪಾಲಯ್ಯನು ಮಲೈ ಕುನಿಯ ನಿನ್ರನ್ ತಿರುನಂದಾವನ ತೋಟವನ್ನು ನೋಡಿಕೊಳ್ಳುತ್ತಿದ್ದನು. ಆತ ದೇವಾಲಯದ ಭಂಡಾರದಲ್ಲಿ 1000 ಪಣಮ್ ಹಣವ್ನನು ಠೇವಣಿಯಾಗಿ ಇಟ್ಟನು. ಆ ಹಣವನ್ನು ದೇವಾಲಯದ ಭೂಮಿಗೆ ನೀರನ್ನು ಒದಗಿಸುವ ಕೆರೆ ಹಾಗೂ ಕಾಲುವೆಗಳ ದುರಸ್ಥಿಗೆ ಬಳಸಲಾಯಿತು. ಆ ಭೂಮಿಯ ಫಸಲಿನಿಂದ ಬಂದ ಆದಾಯದಿಂದ ತಿರುವೇಂಕಟಮ್ ಉಡೈಯಾನ್ ದೇವರಿಗೆ ಶ್ರೀ ಗೋಪಾಲಯ್ಯನ ಹೆಸರಿನಲ್ಲಿ ತಿರುಪ್ಪೋನಕಂ ನೈವೇದ್ಯವನ್ನು ಅರ್ಪಿಸಬೇಕಿತ್ತು. ಆ ನೈವೇದ್ಯಕ್ಕೆ ಬೇಕಾದ ವಸ್ತುಗಳನ್ನು ದೇವಾಲಯದ ವಿಶ್ವಸ್ಥ ಸಮಿತಿಯು ಒದಗಿಸಬೇಕಿತ್ತು. ಅದಕ್ಕೆ ಹಣವನ್ನು ಭಂಡಾರದಿಂದ ನೀಡಬೇಕಿತ್ತು. ಮತ್ತೆ ಆ ಪ್ರಸಾದವನ್ನು ದೇವಾಲಯದ ನೃತ್ಯ ಕಲಾವಿದರಿಗೆ ವಿತರಿಸುವ ವಿವರವನ್ನೂ ಹೊಂದಿದೆ ಈ ಶಾಸನ.

**ಆಕರ :** ತಿ.ತಿ.ದೇ. ಶಾ. ಸಂಪುಟ - II, ನಂ. 66

# ಸಾಳುವ ನರಸಿಂಹನ ತಿರುಮಲೈ ಶಾಸನಂ

ಶಾಸನವಿರುವ ಸ್ಥಳ : ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ದಕ್ಷಿಣದ ಗೋಡೆ)

ರಾಜವಂಶ : ವಿಜಯನಗರ (ಸಾಳುವ) ರಾಜ : ಸಾಳುವ ನರಸಿಂಹ

ಕಾಲ : ಶಾ. ಶ. 1390
= ಕ್ರಿ.ಶ. 1468

ಭಾಷೆ ಮತ್ತು ಲಿಪಿ : ತಮಿಳು

ವಿಷಯ : ಈ ಶಾಸನವು ತಿರುಮಲೈಯ ತಾನತ್ತಾರರು (ಸ್ಥಾನಾಧಿಕಾರಿಗಳು) ಕರಣಂ ಸದಾಶಿವ ನಾಯ್ನರ್ ಜೊತೆಗೆ ಮಾಡಿಕೊಂಡ ಒಪ್ಪಂದವನ್ನು ದಾಖಲಿಸಿದೆ. ಆತ ಶ್ರೀವಾರಿ ಭಂಡಾರದಲ್ಲಿ 1000 ಪಣ ಹಣವನ್ನು ಠೇವಣಿಯಾಗಿ ಇಟ್ಟನು. ಅದಕ್ಕೆ ಪ್ರತಿಯಾಗಿ ದೇವಾಲಯದಲ್ಲಿ ತಿರುವೇಂಕಟವಮ್ ಉಡೈಯಾನ್ ದೇವರಿಗೆ 'ತಿರುಪ್ಪೋನಕಂ' ನೈವೇದ್ಯವನ್ನು ಅರ್ಪಿಸಬೇಕಿತ್ತು. ನೈವೇದ್ಯದ ವಸ್ತುಗಳನ್ನು ಖರೀದಿಸಲು ಠೇವಣಿಯ ಹಣಕ್ಕೆ ಬಂದ ಬಡ್ಡಿಯನ್ನು ಬಳಸಬೇಕಿತ್ತು. ಪ್ರಸಾದದಲ್ಲಿ $\frac{1}{4}$ ಭಾಗವನ್ನು ದಾನಿಗೂ ಮತ್ತು ಒಂದಷ್ಟು ಪ್ರಸಾದವನ್ನು ತಿರುನಿನ್ಱವೇಲಾರ್ ಉಡೈಯಾನ್ ನಲ್ಲಾರ್ ವೇಂಕಟವಾಣನ್ ಇವರಿಗೆ ವಿತರಿಸಬೇಕಿತ್ತು.

ಆಕರ : ತಿ.ತಿ.ದೇ. ಶಾ. ಸಂಪುಟ – II, ನಂ. 37

# ನರಸಿಂಹನ ತಿರುಮಲೈ ಶಾಸನಂ

ಶಾಸನವಿರುವ ಸ್ಥಳ : ತಿರುಮಲೈ; ಚಂದ್ರಗಿರಿ ತಾಲೂಕು, ಚಿತ್ತೂರು ಜಿಲ್ಲೆ; ಆಂಧ್ರಪ್ರದೇಶ (ತಿರುಮಲ ದೇವಾಲಯ ; ಮೊದಲನೆಯ ಪ್ರಾಕಾರ; ದಕ್ಷಿಣದ ಗೋಡೆ)

ರಾಜವಂಶ : ವಿಜಯನಗರ (ಸಾಳುವ) ರಾಜ : ನರಸಿಂಹ

ಕಾಲ : ಶಾ.ಶ. 1385, ಸುಭಾನು ಸಂವತ್ಸರ, ತುಲಾಮಾಸ, ಉತ್ತರಾಷಾಢ ನಕ್ಷತ್ರ, ಶು. 7, ಮಂಗಳವಾರ = ಕ್ರಿ.ಶ. 1463, ಅಕ್ಟೋಬರ್ 18

ಭಾಷೆ ಮತ್ತು ಲಿಪಿ : ತಮಿಳು

ವಿಷಯ : ಈ ಶಾಸನವು ತಾನತ್ತಾರರು (ತಿರುಮಲೈ ದೇವಾಲಯದ ಸ್ಥಾನಪತಿಗಳು) ತಿಮ್ಮರಸ ಉಡೈಯಾರರೊಂದಿಗೆ ಮಾಡಿಕೊಂಡ ಒಪ್ಪಂದವನ್ನು ದಾಖಲಿಸಿದೆ. ತಿಮ್ಮರಸರು ಕೆರೆಯೊಂದನ್ನು ಕಟ್ಟಿಸಿ ಕಾಲುವೆ ತೋಡಲು ಹಣವನ್ನು ಠೇವಣಿ ಯಾಗಿಟ್ಟರು. ಆ ಕಾಲುವೆಯು ಅವಿಲಾಲಿ ಗ್ರಾಮದಲ್ಲಿದ್ದ ದೇವಸ್ಥಾನದ ಭೂಮಿಗೆ ನೀರುಣಿಸಲು ಉಪಯುಕ್ತವಾಗಿ ಬೆಳೆಯನ್ನು ಪಡೆಯಲು ಸಹಕಾರಿಯಾಗಿತ್ತು; ಬಂದ ಬೆಳೆಯಿಂದ ನರಸಿಂಗಾರಾಜ – ಉಡೈರ ದೊರೆಗೆ ಪುಣ್ಯವಾಗಬೇಕೆಂದು ತಿರುವೇಂಕಟಮ್+ಉಡೈಯಾನ್ ದೇವರಿಗೆ ನಾಲ್ಕು ತಿರುಪ್ಪೋನಕ ನೈವೇದ್ಯವನ್ನು ಬೆಳಗಿನ ಸಂಧ್ಯಾ ಸಮಯದಲ್ಲಿ ಅರ್ಪಿಸಬೇಕಾಗಿತ್ತು. ಮತ್ತೆ ಈ ಶಾಸನದ ಪ್ರಕಾರ ಪ್ರಸಾದದ ಒಂದು ಭಾಗವನ್ನು ದೇವಸ್ಥಾನದ ಹೂದೋಟವನ್ನು ಉಳುಮೆಗೈಯುವ ದಾಸನಿಗೆ ನೀಡಬೇಕಲ್ಲದೆ ಉಳಿದ ಪ್ರಸಾದವನ್ನು ಪ್ರಾತಃಕಾಲದಲ್ಲಿ ದೇವರ ದರ್ಶನಕ್ಕೆ ಬಂದ ಭಕ್ತರಿಗೆ ಹಂಚಬೇಕಾಗಿತ್ತು – ವಿತರಿಸಬೇಕಾಗಿತ್ತು.

ಆಕರ : ತಿ.ತಿ.ದೇ. ಶಾ. ಸಂಪುಟ – II, ನಂ. 17